ಕುಶಾಲನಗರ ಯೋಜನಾ ಪ್ರಾಧಿಕಾರ, ಕುಶಾಲನಗರ

ಕಾವೇರಿ ಬಡಾವಣೆ, ಸಂ.05, ಬ್ಲಾಕ್ ನಂ.01, ಕುಶಾಲನಗರ – 571 234

Email Id: kushalnagaradtp@hotmail.com **ದೂರವಾಣಿ ಸಂ: 08276–274040**

ಕುಶಾಲನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಡಾ॥ ಯತೀಶ್ ಉಳ್ಳಾಲ್ ಉಪವಿಭಾಗಾಧಿಕಾರಿಗಳು, ಮಡಿಕೇರಿ ಉಪವಿಭಾಗ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 28–07–2023 ರ ಶುಕ್ರವಾರದಂದು ಅಪರಾಹ್ನ 3.30 ಗಂಟೆಗೆ ನಡೆದ ಪ್ರಾಧಿಕಾರದ 57 ನೇ ಸಾಮಾನ್ಯ ಸಭೆಯ ನಡಾವಳಿ

ಸಭೆಯಲ್ಲಿ ಹಾಜರಿದ್ದವರು :–

1. ಅಧ್ಯಕ್ಷರು
2. ಸದಸ್ಯ ಕಾರ್ಯದರ್ಶಿ, ಕುಶಾಲನಗರ ಯೋಜನಾ ಪ್ರಾಧಿಕಾರ
3. ಮುಖ್ಯಾಧಿಕಾರಿಗಳು, ಪುರಸಭೆ, ಕುಶಾಲನಗರ
4. ಶ್ರೀ ಅಮೃತ್‌ರಾಜ್, ಸ್ಥಳೀಯ ಸಂಸ್ಥೆ ನಾಮನಿರ್ದೇಶಿತ ಸದಸ್ಯರು

ವಿಷಯ ಸಂಖ್ಯೆ(01): ದಿನಾಂಕ: 06–06–2023 ರಂದು ನಡೆದ ಪ್ರಾಧಿಕಾರದ 56ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಓದಿ ಸ್ಥಿರೀಕರಿಸುವ ಬಗ್ಗೆ.

ಟಿಪ್ಪಣಿ: ದಿನಾಂಕ: 06–06–2023 ರಂದು ನಡೆದ ಪ್ರಾಧಿಕಾರದ 56ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಓದಿ ಓಪ್ಪಿ ಸ್ಥಿರೀಕರಿಸುವ ಬಗ್ಗೆ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ.

ನಿರ್ಣಯ: ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಓದಿ, ಚರ್ಚಿಸಲಾಯಿತು. ಸದರಿ ಸಭೆಯ ನಡವಳಿಗಳ ವಿಷಯ ಸಂಖ್ಯೆ (06) ರಲ್ಲಿ ಕುಶಾಲನಗರದಲ್ಲಿ ಕಂಡುಬರುತ್ತಿರುವ ಅನಧಿಕೃತ ಬಡಾವಣೆ ಬೆಳವಣಿಗೆಯನ್ನು ತಡೆಗಟ್ಟಲು ಸದರಿ ವಿಚಾರದ ಬಗ್ಗೆ ಸಾರ್ವಜನಿಕರ ಗಮನಕ್ಕೆ ತರಲು ಕುಶಾಲನಗರ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಒಳಪಡುವ ಗುಡ್ಡೆಹೊಸೂರು ಗ್ರಾಮಪಂಚಾಯಿತಿ, ಕೂಡುಮಂಗಳೂರು ಗ್ರಾಮಪಂಚಾಯಿತಿಗಳಿಗೆ ಹಾಗೂ ಕುಶಾಲನಗರ ಪುರಸಭೆಗೆ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಪತ್ರ ಬರೆಯಬೇಕೆಂದು ಹಾಗೂ ಅನಧಿಕೃತ ಬಡಾವಣೆಗಳ ನಿರ್ಮಾಣದ ಬಗ್ಗೆ ಸಾರ್ವಜನಿಕ ಪ್ರಕಟಣೆಯನ್ನು ಪರಸಭೆ ಮತ್ತು ಗ್ರಾಮಪಂಚಾಯಿತಿ ಕಛೇರಿಗಳ ಮುಂದೆ ಪ್ರಕಟಣಾ ಫಲಕದಲ್ಲಿ ಅಳವಡಿಸಿಕೊಳ್ಳುವಂತೆ ನಿರ್ಣಯಿಸಲಾಗಿದ್ದು, ಅದರಂತೆ ಪ್ರಕಟಣೆಯನ್ನು ಸಿದ್ಧಪಡಿಸಿ ಸದರಿ ಪಂಚಾಯಿತಿಗಳಿಗೆ ದಿನಾಂಕ: 15–06–2023 ರಂದು ಪತ್ರ ಬರೆದು ಪ್ರಕಟಣಾ ಫಲಕದಲ್ಲಿ ಅಳವಡಿಸಿಕೊಳ್ಳುವಂತೆ ತಿಳಿಸಲಾಗಿದೆ. ಸದರಿ ಪ್ರಕಟಣೆಯನ್ನು ದಿನಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಅಧ್ಯಕ್ಷರು ಸಭೆಯಲ್ಲಿ ಸೂಚಿಸಿದರು. ಅದರಂತೆ ಅನಧಿಕೃತ ಬಡಾವಣೆ ಬೆಳವಣಿಗೆಯನ್ನು ತಡೆಗಟ್ಟಲು ಸಾರ್ವಜನಿಕರ ಗಮನಕ್ಕೆ ತರಲು ಪ್ರಕಟಣೆಯನ್ನು ಸ್ಥಳೀಯ ದಿನಪತ್ರಿಕೆಯಲ್ಲಿ ಪ್ರಕಟಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಇನ್ನುಳಿದ ನಡವಳಿಗಳನ್ನು ಓದಿ, ಒಪ್ಪಿ ಸರ್ವಾನುಮತದಿಂದ ಸ್ಥಿರೀಕರಿಸಲಾಯಿತು.

ವಿಷಯ ಸಂಖ್ಯೆ:(02): ಪ್ರಾಧಿಕಾರದ ಖಾತೆಗೆ ಜೂನ್ 2023ರ ಮಾಹೆಯ ಜಮಾ ಮತ್ತು ಖರ್ಚುಗಳ ವಿವರಗಳನ್ನು ಪ್ರಾಧಿಕಾರದ ಸಭೆಗೆ ಮಂಡಿಸುವ ಬಗ್ಗೆ.

ಕ್ರ. ಸಂ.	ಖಾತೆಯ ವಿವರ	ಪ್ರಾರಂಭಿಕ ಶಿಲ್ಕು	ಮಾಹೆಯ ಜಮಾ	ಒಟ್ಟು	ಮಾಹೆಯ ಖರ್ಚು	ಉಳಿಕೆ ಶಿಲ್ಕು
ಜೂನ್–2023						
1	ಉಳಿತಾಯ ಶುಲ್ಕದ ಖಾತೆ	29,93,346=50	8,42,360=00	38,35,706=00	59,848=00	37,75,858=00
2	ಕೆರೆ ಅಭಿವೃದ್ಧಿ ಶುಲ್ಕದ ಖಾತೆ	2,80,258=00	5,537=00	2,85,795=00	—	2,85,795=00

3	ಸೆಸ್ ಶುಲ್ಕದ ಖಾತೆ	2,03,903=00	2,767=00	2,06,670=00	—	2,06,670=00

ಟಪ್ಪಣಿ: ಜೂನ್ 2023ರ ಮಾಹೆಯ ಜಮಾ & ಖರ್ಚುಗಳನ್ನು ಸ್ಥಿರೀಕರಣಕ್ಕಾಗಿ ಮಂಡಿಸಲಾಗಿದೆ.

ನಿರ್ಣಯ: ಜೂನ್ 2023ರ ಮಾಹೆಯ ಜಮಾ ಮತ್ತು ಖರ್ಚುಗಳನ್ನು ಸಭೆಯಲ್ಲಿ ಚರ್ಚಿಸಿ, ಸರ್ವಾನುಮತದಿಂದ ಒಪ್ಪಿ ಸ್ಥಿರೀಕರಿಸಲಾಯಿತು.

ವಿಷಯ ಸಂಖ್ಯೆ(03): ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಿರುವ ಪ್ರಸ್ತಾವನೆ:–

i. ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮುಳ್ಳುಸೋಗೆ ಗ್ರಾಮದ ಸ.ನಂ. 165/19 ರಲ್ಲಿ 0.18.50 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿರುವ ಬಗ್ಗೆ (**ಅರ್ಜಿದಾರರು:– ಶ್ರೀ ಹೆಚ್.ಪಿ. ಯೋಗೇಶ್**).

ಟಿಪ್ಪಣಿ: ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮುಳ್ಳುಸೋಗೆ ಗ್ರಾಮದ ಸ.ನಂ. 165/19 ರಲ್ಲಿ 0.18.50 ಎಕರೆ ವಿಸ್ತೀರ್ಣದ ವಿಸ್ತೀರ್ಣದ ಜಮೀನನ್ನು ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಇವರ ಅಧಿಕೃತ ಜ್ಞಾಪನ ಪತ್ರ ಸಂ: 395999 ದಿನಾಂಕ: 25–10–2022 ರಲ್ಲಿ ವಸತಿ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ. ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದೆ. ಪ್ರಸ್ತಾವಿತ ಜಮೀನು ಪಶ್ಚಿಮ ದಿಕ್ಕಿನಲ್ಲಿ 9.0ಮೀ ಅಗಲದ ರಸ್ತೆಗೆ ಲಗತ್ತಾಗಿದೆ ಮತ್ತು ಉತ್ತರ ದಿಕ್ಕಿನಲ್ಲಿ ಹಾಲಿ 7.90ಮೀ ಅಗಲದ ಕಾಂಕ್ರಿಟ್ ರಸ್ತೆಗೆ ಲಗತ್ತಾಗಿದ್ದು, 9.0ಮೀ ಅಗಲಕ್ಕೆ ವಿಸ್ತರಿಸಲು ವಿನ್ಯಾಸ ನಕ್ಷೆಯಲ್ಲಿ ಪ್ರಸ್ತಾವಿಸಲಾಗಿದೆ. ಭೂದಾಖಲೆಗಳ ಸಹಾಯಕ ನಿರ್ದೇಶಕರು ಸಹಿ ಮಾಡಿ ನೀಡಿರುವ ಸರ್ವೆ ನಕ್ಷೆಯಂತೆ ವಿನ್ಯಾಸದಲ್ಲಿ ಎಲ್ಲೆ/ಸುತ್ತಳತೆಯನ್ನು ನಿಗಧಿಪಡಿಸಿ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಿದ್ದು, ವಸತಿ ಉಪಯೋಗಕ್ಕಾಗಿ 727.49 ಚ.ಮೀ (ಶೇ. 97.17%) ಮತ್ತು ರಸ್ತೆ ವಿಸ್ತರಣೆಗಾಗಿ 21.20 ಚ.ಮೀ (ಶೇ. 02.83%) ವಿಸ್ತೀರ್ಣದ ಪ್ರದೇಶವನ್ನು ಕಾಯ್ದಿರಿಸಿ ದಿನಾಂಕ:17–03–2020 ರಂದು ನಡೆದ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ, ಮಹಾಯೋಜನೆ–2031 ರ ವಲಯ ನಿಯಮಾವಳಿಯ ಅಧ್ಯಾಯ 34(ಬಿ) ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 ರನ್ವಯ ಸದರಿ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ದಿನಾಂಕ: 23–06–2023 ರಂದು ತಾಂತ್ರಿಕ ಅನುಮೋದನೆಯನ್ನು ನೀಡಲಾಗಿದ್ದು, ಸಭೆಯ ಸ್ಥಿರೀಕರಣಕ್ಕಾಗಿ ಪ್ರಾಧಿಕಾರದ ಸಭೆಗೆ ಮಂಡಿಸಿದೆ.

ನಿರ್ಣಯ: ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ ಮೇಲ್ಕಾಣಿಸಿದ ಏಕ ನಿವೇಶನದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಈಗಾಗಲೇ ನಕ್ಷೆಗೆ ತಾಂತ್ರಿಕ ಅನುಮೋದನೆ ನೀಡಿರುವುದನ್ನು ಸಭೆಯು ಸರ್ವಾನುಮತದಿಂದ ಒಪ್ಪಿ ಸ್ಥಿರೀಕರಿಸಲಾಯಿತು

ವಿಷಯಸಂಖ್ಯೆ(4): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ ಮುಳ್ಳುಸೋಗೆ ಗ್ರಾಮದ ಸ.ನಂ. 41/ಎ ರಲ್ಲಿ 2.17 ಎಕರೆ, ಸ.ನಂ. 42/1 ರಲ್ಲಿ 4.32.50 ಎಕರೆ ಮತ್ತು ಗೊಂದಿಬಸವನಹಳ್ಳಿ ಗ್ರಾಮದ ಸ.ನಂ. 44/3 ರಲ್ಲಿ 0.88 ಎಕರೆ, ಸ.ನಂ. 37/2 ರಲ್ಲಿ 0.52.50 ಎಕರೆ ಒಟ್ಟು 7.90 ಎಕರೆ ವಿಸ್ತೀರ್ಣದ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡುವಂತೆ ಹಾಗೂ ನಿವೇಶನಗಳನ್ನು ಬಿಡುಗಡೆಗೊಳಿಸುವಂತೆ ಕೋರಿರುವ ಬಗ್ಗೆ (**ಅರ್ಜಿದಾರರು:– ಶ್ರೀ ಎಸ್.ಎಸ್. ಮನೋಹರ್**)

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಕಡತವನ್ನು ಪರಿಶೀಲಿಸಲಾಗಿ, ಪ್ರಶ್ನಿತ ಜಮೀನನ್ನು ಮಾನ್ಯ ಜಿಲ್ಲಾದಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರು ದಿನಾಂಕ:12–09–2008 ರಂದು ವಾಸದ ಉದ್ದೇಶಕ್ಕೆ ಭೂಪರಿವರ್ತಿಸಿ ಆದೇಶಿಸಿರುತ್ತಾರೆ. ಸದರಿ ಜಮೀನಿನ ವಸತಿ ವಿನ್ಯಾಸ ನಕ್ಷೆಯು ಈ ಹಿಂದೆ ದಿನಾಂಕ:20–10–2008 ರಂದು ಕಾರ್ಯದರ್ಶಿ, ಗ್ರಾಮಪಂಚಾಯಿತಿ, ಮುಳ್ಳುಸೋಗೆ ಇವರಿಂದ ಅನುಮೋದನೆಯಾಗಿರುವುದು ಕಂಡುಬಂದಿದೆ ಹಾಗೂ ಅದರ ಭೂಉಪಯೋಗ ವಿಶ್ಲೇಷಣೆ ಈ ಕೆಳಕಂಡಂತೆ ಇರುತ್ತದೆ.

ಕ್ರ. ಸಂ.	ಭೂಉಪಯೋಗ	ವಿಸ್ತೀರ್ಣ (ಚದರ ಅಡಿಗಳಲ್ಲಿ)	ಶೇಕಡಾವಾರು
1	ವಸತಿಗಾಗಿ	230833.00	71.47%
2	ಉದ್ಯಾನವನ	22216.00	6.88%
3	ರಸ್ತೆಗಾಗಿ	69892.00	24.65%
ಒಟ್ಟು		322941.00	100.00

ಸದರಿ ವಿನ್ಯಾಸದಲ್ಲಿನ ರಸ್ತೆ ಮತ್ತು ಉದ್ಯಾನವನ ಜಾಗಗಳನ್ನು ಮಾಲೀಕರು ದಿನಾಂಕ:03–11–2008 ರಂದು ದಾನಪತ್ರದ ಮೂಲಕ ಮುಳ್ಳುಸೋಗೆ ಗ್ರಾಮಪಂಚಾಯಿತಿಗೆ ಹಸ್ತಾಂತರಿಸಿರುವುದು ಕಂಡುಬಂದಿದೆ ಹಾಗೂ ಕೆಲವು ನಿವೇಶನಗಳು ಮಾರಾಟವಾಗಿರುತ್ತದೆ. ತದನಂತರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಮುಳ್ಳುಸೋಗೆ ಗ್ರಾಮಪಂಚಾಯಿತಿ ಇವರು ದಿನಾಂಕ:12–08–2016 ರಂದು ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿ, ಅರ್ಜಿದಾರರು ಸದರಿ ಲೇಔಟ್ ನಕಾಶೆಯನ್ನು ಕುಶಾಲನಗರ ಯೋಜನಾ ಪ್ರಾಧಿಕಾರದಿಂದ ಮಾರ್ಪಡಿಸಿ ತಾಂತ್ರಿಕ ಅನುಮೋದನೆ ಪಡೆದುಕೊಳ್ಳುವ ಸಲುವಾಗಿ ಶಿಫಾರಸ್ಸು ಪತ್ರ ಕೋರಿ ಅರ್ಜಿ ಸಲ್ಲಿಸಿರುವುದರಿಂದ ಸದರಿ ಅರ್ಜಿಯನ್ನು ಗ್ರಾಮಪಂಚಾಯಿತಿ ಸಾಮಾನ್ಯ ಸಭೆ ದಿನಾಂಕ:10–08–2016 ರಂದು ಮಂಡಿಸಲಾಗಿ ಸಭೆಯು ಈಗಾಗಲೇ ಮಾರಾಟ ಮಾಡಿದ ನಿವೇಶನಗಳನ್ನು ಒಳಗೊಂಡಂತೆ ಹೊಸ ನಕಾಶೆ ತಯಾರಿಸಲು ಹಾಗೂ ಈ ಹಿಂದೆ ಗ್ರಾಮಪಂಚಾಯಿತಿ ಅನುಮೋದಿತ ಬಡಾವಣಾ ನಕ್ಷೆಯನ್ನು ರದ್ದುಪಡಿಸಿ ಮಾರ್ಪಾಟು ಮಾಡಿ ತಾಂತ್ರಿಕ ಅನುಮೋದನೆ ನೀಡುವಂತೆ ಠರಾವು ಸಂಖ್ಯೆ 24ರ ಮೇರೆಗೆ ತೀರ್ಮಾನಿಸಲಾಗಿದೆ ಆದ್ದರಿಂದ ಸದರಿ ಲೇಔಟ್‌ಗೆ ಸಂಬಂಧಿಸಿದ ಮಾರ್ಪಾಡಿತ ನಕ್ಷೆಯನ್ನು ತಯಾರಿಸಿ ಪ್ರಾಧಿಕಾರದಿಂದ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ದಿನಾಂಕ:23–08–2016 ರಂದು ನಡೆದ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಚರ್ಚಿಸಲಾಗಿದ್ದು, ಅರ್ಜಿದಾರರು ಕೆಲವು ನಿವೇಶನಗಳನ್ನು ಮಾರಾಟ ಮಾಡಿದ್ದು ಹಾಗೂ ಮಾರಾಟವಾದ ನಿವೇಶನಗಳಲ್ಲಿ ಕಟ್ಟಡ ನಿರ್ಮಿಸಲು ಪ್ರಾಧಿಕಾರದಿಂದ ಕಟ್ಟಡ ಪರವಾನಿಗೆಯನ್ನು ನೀಡದಿರುವ ಕಾರಣ, ಗ್ರಾಮ ಪಂಚಾಯಿತಿಯಿಂದ ಈ ಮೊದಲು ಅನುಮೋದಿತವಾಗಿರುವ ಬಡಾವಣೆ ನಕ್ಷೆಯನ್ನು ರದ್ದುಪಡಿಸಿ ಮಾರ್ಪಾಡು ನಕ್ಷೆಗೆ ಯೋಜನಾ ಪ್ರಾಧಿಕಾರದಿಂದ ಅನುಮೋದನೆ ಪಡೆಯುವಂತೆ ಗ್ರಾಮಪಂಚಾಯಿತಿ ಠರಾವು ಸಂಖ್ಯೆ 24 ರ ಮೇರೆಗೆ ತೀರ್ಮಾನಿಸಿ, ಪ್ರಸ್ತಾವನೆಯನ್ನು ಸಲ್ಲಿಸಿರುವುದರಿಂದ, ಅರ್ಜಿದಾರರು ಮಾರಾಟಮಾಡಿರುವ ನಿವೇಶನಗಳಿಗೆ ಏನಾದರೂ ಕಾನೂನು ದೃಷ್ಟಿಯಲ್ಲಿ ತೊಡಕು ಉಂಟಾದಲ್ಲಿ ನಿವೇಶನದ ಮಾಲೀಕರು ಅವರ ಸ್ವಂತ ಖರ್ಚಿನಿಂದ ಬಗೆಹರಿಸಿಕೊಡುವುದಾಗಿ ಪ್ರಮಾಣ ಪತ್ರವನ್ನು ನೀಡಿರುವುದನ್ನು ಗಮನಿಸಿ ಹಾಗೂ ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಕಾನೂನು ಸಲಹೆಗಾರರು ನೀಡಿದ ಸಲಹೆಯನ್ನು ಪರಿಗಣಿಸಿ, ಗ್ರಾಮ ಪಂಚಾಯಿತಿಯಿಂದ ಅನುಮೋದನೆಗೊಂಡ ನಕ್ಷೆಯು ವಲಯನಿಯಮಾವಳಿಗಳ ಪ್ರಕಾರ ಇಲ್ಲದಿರುವುದರಿಂದ ಸದರಿ ವಿನ್ಯಾಸ ನಕ್ಷೆಯನ್ನು ರದ್ದುಪಡಿಸಿ ವಲಯನಿಯಮಾವಳಿ ಪ್ರಕಾರ ಮಾರ್ಪಡಿತ ನಕ್ಷೆಯನ್ನು ಅನುಮೋದಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಗಿದೆ.

ಪ್ರಾಧಿಕಾರದ ಸಭೆಯ ತೀರ್ಮಾನದಂತೆ, ಗ್ರಾಮಪಂಚಾಯಿತಿಯಿಂದ ನೇರವಾಗಿ ಅನುಮೋದನೆ ನೀಡಲಾದ ವಿನ್ಯಾಸ ನಕ್ಷೆಯನ್ನು ರದ್ದುಪಡಿಸಿ, ಅರ್ಜಿದಾರರಿಂದ ದಿನಾಂಕ:06–09–2016 ರಂದು ಅಗತ್ಯ ಶುಲ್ಕಗಳನ್ನು ಪಾವತಿಸಿಕೊಂಡು ಪ್ರಶ್ನಿತ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ಈ

ಕಛೇರಿಯಿಂದ ಅನುಮೋದನೆ ನೀಡಲಾಗಿದೆ. ಅದರ ಭೂಉಪಯೋಗ ವಿಶ್ಲೇಷಣೆ ಈ ಕೆಳಕಂಡಂತೆ ಇರುತ್ತದೆ.

ಕ್ರ. ಸಂ.	ಭೂಉಪಯೋಗ	ವಿಸ್ತೀರ್ಣ (ಚದರ ಮೀಟರ್‌ಗಳಲ್ಲಿ)	ಶೇಕಡಾವಾರು
1	ವಸತಿಗಾಗಿ	16731.94	52.35%
2	ವಾಣಿಜ್ಯಕ್ಕಾಗಿ	846.92	2.65%
3	ನಾಗರೀಕ ಸೌಲಭ್ಯಕ್ಕಾಗಿ	1339.26	4.19%
4	ಉದ್ಯಾನವನಕ್ಕಾಗಿ	3196.41	10.0%
5	ರಸ್ತೆ/ಬಫರ್‌ಗಾಗಿ	9848.87	30.81%
	ಒಟ್ಟು	31963.40	100.00

ಬಡಾವಣೆ ಮಾಲೀಕರು ದಿನಾಂಕ:23–09–2016 ರಂದು ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿರುವ 1339.26 ಚ.ಮೀ ವಿಸ್ತೀರ್ಣವನ್ನು ಪ್ರಾಧಿಕಾರದ ಹೆಸರಿಗೆ ಪರಿತ್ಯಾಜನಾ ಪತ್ರದ ಮೂಲಕ ನೋಂದಣಿ ಮಾಡಿರುತ್ತಾರೆ.

ದಿನಾಂಕ:26–09–2016 ರಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಮುಳ್ಳುಸೋಗೆ ಗ್ರಾಮಪಂಚಾಯಿತಿ ಇವರು ಪ್ರಸ್ತಾವನೆಯನ್ನು ಸಲ್ಲಿಸಿ, ಸದರಿ ವಸತಿ ವಿನ್ಯಾಸ ನಕ್ಷೆಯಲ್ಲಿ ಈಗಾಗಲೇ ಮಾರಾಟವಾದ ನಿವೇಶನಗಳನ್ನು ಹೊರತುಪಡಿಸಿ ಶೇಕಡ 40ರ ನಿವೇಶನಗಳನ್ನು ಬಿಡುಗಡೆಗೊಳಿಸಲು ಗ್ರಾಮಪಂಚಾಯಿತಿ ಸಭೆಯಲ್ಲಿ ತೀರ್ಮಾನಿಲಾಗಿರುತ್ತದೆ, ಸದರಿ ವಿನ್ಯಾಸದಲ್ಲಿ ಬರುವ ರಸ್ತೆ ಹಾಗೂ ಉದ್ಯಾನವನ ಜಾಗಗಳನ್ನು ಅರ್ಜಿದಾರರು ಗ್ರಾಮಪಂಚಾಯಿತಿ ಹೆಸರಿಗೆ ನೋಂದಾಯಿಸಿರುತ್ತಾರೆ, ಸಿ.ಎ ನಿವೇಶನವನ್ನು ಪ್ರಾಧಿಕಾರವು ನೋಂದಾಯಿಸಿಕೊಂಡು ನಂತರ ನಿಯಮಾನುಸಾರ ಮೊದಲನೇ ಹಂತದ ನಿವೇಶನಗಳನ್ನು ಬಿಡುಗಡೆಗೊಳಿಸುವಂತೆ ಕೋರಿರುತ್ತಾರೆ. ಅರ್ಜಿದಾರರು ಸದರಿ ಜಮೀನಿನ ಮಾರ್ಪಡಿತ ವಿನ್ಯಾಸ ನಕ್ಷೆಯನ್ನು ಅನುಮೋದನೆ ಮಾಡಿಕೊಡಬೇಕೆಂದು ದಿನಾಂಕ:27–09–2016 ರಂದು ಈ ಕಛೇರಿಗೆ ಮನವಿ ಸಲ್ಲಿಸಿರುತ್ತಾರೆ. ಸರ್ಕಾರದ ಸುತ್ತೋಲೆ ಸಂ:ನಇ/08/ಟಿಟಿಪಿ/2013 ದಿನಾಂಕ:24–05–2014 ರನ್ವಯ ಶೇ.40% ರಂತೆ ಸದರಿ ವಿನ್ಯಾಸ ನಕ್ಷೆಯಲ್ಲಿ ಬರುವ ಒಟ್ಟು 91 ನಿವೇಶನಗಳ ಪೈಕಿ 54 ನಿವೇಶನಗಳನ್ನು (ಇದರಲ್ಲಿ 29 ನಿವೆಶನಗಳು ಈಗಾಗಲೇ ಮಾರಾಟವಾಗಿರುತ್ತದೆ) ಮೊದಲನೇ ಹಂತದಲ್ಲಿ ದಿನಾಂಕ:21–10–2016 ರಂದು ಈ ಕಛೇರಿಯಿಂದ ಬಿಡುಗಡೆ ಮಾಡಲಾಗಿದೆ.

ಅರ್ಜಿದಾರರು ಮಾರ್ಪಡಿತ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಕೋರಿದ್ದು, ಅರ್ಜಿದಾರರ ಮನವಿಯಂತೆ ದಿನಾಂಕ:28–10–2016 ರಂದು ಈ ಕಛೇರಿಯಿಂದ ಮಾರ್ಪಡಿತ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿದ್ದು, ಅದರ ಭೂಉಪಯೋಗ ವಿಶ್ಲೇಷಣೆ ಈ ಕೆಳಕಂಡಂತೆ ಇರುತ್ತದೆ.

ಕ್ರ. ಸಂ.	ಭೂಉಪಯೋಗ	ವಿಸ್ತೀರ್ಣ (ಚದರ ಮೀಟರ್‌ಗಳಲ್ಲಿ)	ಶೇಕಡಾವಾರು
1	ವಸತಿಗಾಗಿ	16732.97	52.34%
2	ವಾಣಿಜ್ಯಕ್ಕಾಗಿ	850.613	2.66%
3	ನಾಗರೀಕ ಸೌಲಭ್ಯಕ್ಕಾಗಿ	1447.52	4.52%
4	**ಸಾರ್ವಜನಿಕ ಉಪಯುಕ್ತತೆ** (OHT)	90.43	0.28%
5	ಉದ್ಯಾನವನಕ್ಕಾಗಿ	3042.14	9.51%
6	ರಸ್ತೆ/ಬಫರ್‌ಗಾಗಿ	9806.48	30.81%
	ಒಟ್ಟು	31970.16	100.00

ಅರ್ಜಿದಾರರು ದಿನಾಂಕ: 11–07–2019ರಂದು ಮನವಿ ಸಲ್ಲಿಸಿ, ಬಡಾವಣೆಯ ಅವಧಿ ಮುಗಿದಿರುತ್ತದೆ ಆದ್ದರಿಂದ ಬಡಾವಣೆಯಲ್ಲಿ ಮೂಲ ಸೌಕರ್ಯಗಳನ್ನು ಮಾಡಲು ರಿನಿವಲ್ ಮಾಡಿಕೊಡಬೇಕೆಂದು ಕೋರಿರುವುದು ಕಂಡುಬಂದಿದೆ.

ದಿನಾಂಕ:29–10–2022 ರಂದು ಅರ್ಜಿದಾರರು ಈ ಕಛೇರಿಗೆ ಮನವಿ ಸಲ್ಲಿಸಿ, ವಸತಿ ವಿನ್ಯಾಸ ನಕ್ಷೆಯನ್ನು ಅಭಿವೃದ್ಧಿಪಡಿಸಲಾಗಿದ್ದು, ಸಂಬಂಧಪಟ್ಟ ಇಲಾಖೆಗಳಿಂದ ದೃಢೀಕರಣ ಪತ್ರ ಪಡೆದು ಸಲ್ಲಿಸಬೇಕಾಗಿರುವುದರಿಂದ ಸಂಬಂಧಿಸಿದ ಇಲಾಖೆಗಳಿಗೆ ಕಾಮಗಾರಿ ಮುಕ್ತಾಯಗೊಂಡಿರುವ ದೃಢೀಕರಣ ನೀಡಲು ತಮ್ಮ ಕಛೇರಿಯಿಂದ ಶಿಫಾರಸ್ಸು ಪತ್ರವನ್ನು ನೀಡಬೇಕೆಂದು ವಿನಂತಿಸಿರುತ್ತಾರೆ. ಆದ್ದರಿಂದ ದಿನಾಂಕ:28–11–2022 ರಂದು ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಮತ್ತು ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯಿತಿ ಕುಶಾಲನಗರ ಇವರುಗಳಿಗೆ ಪತ್ರ ಬರೆದು ತಮ್ಮ ಇಲಾಖೆಗೆ ಸಂಬಂಧಪಟ್ಟ ಕಾಮಗಾರಿಗಳನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿರುವ ಬಗ್ಗೆ ಪರಿಶೀಲಿಸಿ ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರವನ್ನು ಈ ಕಛೇರಿಗೆ ಕಳುಹಿಸುವಂತೆ ಕೋರಲಾಗಿದೆ.

ಅರ್ಜಿದಾರರು ವಿನ್ಯಾಸವನ್ನು ಅಭಿವೃದ್ಧಿಪಡಿಸಿರುವ ಬಗ್ಗೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಮತ್ತು ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯಿತಿ ಕುಶಾಲನಗರ ಇವರುಗಳು ನೀಡಿರುವ ಕಾಮಗಾರಿ ಮುಕ್ತಾಯ ದೃಢೀಕರಣ ಪತ್ರಗಳ ಜೆರಾಕ್ಸ್ ಪ್ರತಿಗಳನ್ನು ಮಾತ್ರ ನೀಡಿರುತ್ತಾರೆ. ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ ಇಲಾಖೆಯ ಕಾಮಗಾರಿ ಮುಕ್ತಾಯ ದೃಢೀಕರಣ ಪತ್ರದ ಮೂಲ ಪ್ರತಿ ಈ ಕಛೇರಿಯಲ್ಲಿ ಸ್ವೀಕೃತಗೊಂಡಿದೆ. ಅರ್ಜಿದಾರರು ಇತ್ತೀಚಿಸಿ ಇ.ಸಿ. ಪ್ರತಿಯನ್ನು ಸಲ್ಲಿಸಿರುವುದಿಲ್ಲ. ದಿನಾಂಕ:05–06–2023 ರಂದು ಮುಖ್ಯಾಧಿಕಾರಿಗಳು, ಪುರಸಭೆ, ಕುಶಾಲನಗರ ಮತ್ತು ಅರ್ಜಿದಾರರು ಸದರಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡುವಂತೆ ಹಾಗೂ ನಿವೇಶನಗಳನ್ನು ಬಿಡುಗಡೆಗೊಳಿಸುವಂತೆ ಕೋರಿರುತ್ತಾರೆ. ಸದರಿ ವಿಷಯವನ್ನು ಸಭೆಗೆ ಮಂಡಿಸಿದೆ.

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಪ್ರಶ್ನಿತ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ಈ ಹಿಂದೆ ಮುಳ್ಳುಸೋಗೆ ಗ್ರಾಮಪಂಚಾಯಿತಿಯಿಂದ ಅನುಮೋದನೆ ನೀಡಿದ್ದು, ನಂತರ ಈ ಕಛೇರಿಯಿಂದ ಮೊದಲನೆ ಬಾರಿಗೆ ಕರಡು ವಿನ್ಯಾಸ ನಕ್ಷೆ ಅನುಮೋದನೆ ನೀಡಲಾಗಿರುತ್ತದೆ. ತದನಂತರ ಮಾರ್ಪಡಿತ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿದ್ದು, ಉದ್ಯಾನವನ, ರಸ್ತೆ ಹಾಗೂ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿರುವ ವಿಸ್ತೀರ್ಣದಲ್ಲಿ ಈ ಕೆಳಕಂಡಂತೆ ವ್ಯತ್ಯಾಸ ಉಂಟಾಗಿರುತ್ತದೆ.

ಕ್ರ. ಸಂ	ಅನುಮೋದನೆ ವಿವರ	ಅನುಮೋದನೆ ಗೊಂಡ ದಿನಾಂಕ	ಉದ್ಯಾನವನ		ರಸ್ತೆ		ನಾಗರೀಕ ಸೌಲಭ್ಯ		ವ್ಯತ್ಯಾಸದ ವಿಸ್ತೀರ್ಣ		
			ವಿಸ್ತೀರ್ಣ	ಶೇಕಡಾ	ವಿಸ್ತೀರ್ಣ	ಶೇಕಡಾ	ವಿಸ್ತೀರ್ಣ	ಶೇಕಡಾ	ಉದ್ಯಾನವನ	ರಸ್ತೆ	ನಾಗರೀಕ ಸೌಲಭ್ಯ
1	ಕಾರ್ಯದರ್ಶಿ, ಮುಳ್ಳುಸೋಗೆ ಗ್ರಾಮ ಪಂಚಾಯಿತಿ ಇವರು ನೀಡಿರುವ ಅನುಮೋದನೆ	20–10–2008	2063.93 ಚ.ಮೀ	6.88%	6493.18 ಚ.ಮೀ	21.69%	ನಾಗರೀಕ ಸೌಲಭ್ಯಕ್ಕಾಗಿ ಜಾಗವನ್ನು ಕಾಯ್ದಿರಿಸಿರುವುದಿಲ್ಲ		–	–	–
2	ಈ ಕಛೇರಿಯಿಂದ ನೀಡಿರುವ ಕರಡು ವಿನ್ಯಾಸ ನಕ್ಷೆ ಅನುಮೋದನೆ	06–09–2016	3196.41 ಚ.ಮೀ	10.0%	9848.87 ಚ.ಮೀ	30.81%	1339.26 ಚ.ಮೀ	4.19%	–	–	–
3	ಈ ಕಛೇರಿಯಿಂದ ನೀಡಿರುವ ಮಾರ್ಪಡಿತ ವಿನ್ಯಾಸ ನಕ್ಷೆ ಅನುಮೋದನೆ	28–10–2016	3042.14 ಚ.ಮೀ	9.51%	9806.48 ಚ.ಮೀ	30.81%	1447.52 ಚ.ಮೀ	4.52%	154.27	42.39	108.26

ಅರ್ಜಿದಾರರು ಮುಳ್ಳುಸೋಗೆ ಗ್ರಾಮ ಪಂಚಾಯಿತಿಯಿಂದ ಅನುಮೋದನೆಗೊಂಡ ನಕ್ಷೆಯಂತೆ ಉದ್ಯಾನವನ (2063.93 ಚ.ಮೀ) ಹಾಗೂ ರಸ್ತೆಗಾಗಿ (6493.18.00 ಚ.ಮೀ) ಕಾಯ್ದಿರಿಸಿರುವ

ವಿಸ್ತೀರ್ಣವನ್ನು ಗ್ರಾಮಪಂಚಾಯಿತಿಗೆ ಹಸ್ತಾಂತರಿಸಿರುತ್ತಾರೆ. ಆದರೆ ಪ್ರಾಧಿಕಾರದಿಂದ ಅನುಮೋದನೆಗೊಂಡ ಮಾರ್ಪಡಿತ ವಿನ್ಯಾಸ ನಕ್ಷೆಯಂತೆ ಅಳತೆಗಳಲ್ಲಿ ವ್ಯತ್ಯಾಸ ಉಂಟಾಗಿರುತ್ತದೆ. ಅಲ್ಲದೆ ನಾಗರೀಕ ಸೌಲಭ್ಯದ ವಿಸ್ತೀರ್ಣದಲ್ಲೂ ವ್ಯತ್ಯಾಸ ಉಂಟಾಗಿರುವುದರಿಂದ ಹೆಚ್ಚುವರಿ ವಿಸ್ತೀರ್ಣವನ್ನು ಪ್ರಾಧಿಕಾರಕ್ಕೆ ನೋಂದಾಯಿಸಬೇಕಾಗಿರುತ್ತದೆ.

ಪ್ರಾಧಿಕಾರದಿಂದ ನೀಡಿರುವ ಮಾರ್ಪಡಿತ ವಸತಿ ವಿನ್ಯಾಸ ನಕ್ಷೆಯಲ್ಲಿ ತೋಡು ಕಂಡುಬಂದಿದ್ದು ಅದರ ವಿಸ್ತೀರ್ಣವನ್ನು ನಕ್ಷೆಯಲ್ಲಿ ತೋರಿಸಿರುವುದಿಲ್ಲ. ತೋಡಿನ ಪಶ್ಚಿಮ ದಿಕ್ಕಿಗೆ ಬಫರ್ ಕಾಯ್ದಿರಿಸಿದ್ದು, ಪೂರ್ವ ದಿಕ್ಕಿನಲ್ಲಿ ಬಫರ್ ಬದಲು ರಸ್ತೆಯನ್ನು ಅಭಿವೃದ್ಧಿಪಡಿಸಿರುತ್ತಾರೆ. ಸದರಿ ವಿನ್ಯಾಸ ನಕ್ಷೆಯಲ್ಲಿ ಬರುವ ಒಟ್ಟು 91 ನಿವೇಶನಗಳ ಪೈಕಿ 54 ನಿವೇಶನಗಳನ್ನು (ಇದರಲ್ಲಿ 29 ನಿವೆಶನಗಳು ಈಗಾಗಲೇ ಮಾರಾಟವಾಗಿದೆ) ಮೊದಲನೇ ಹಂತದಲ್ಲಿ ದಿನಾಂಕ:21–10–2016 ರಂದು ಬಿಡುಗಡೆ ಮಾಡಲಾಗಿದೆ. ಅದರಲ್ಲಿ ನಿವೇಶನ ಸಂಖ್ಯೆ 88, 89, 90, 91 ನಾಲ್ಕು ನಿವೇಶನಗಳು ಗೊಂದಿಬಸವನಹಳ್ಳಿ ಗ್ರಾಮಕ್ಕೆ ಸೇರಿರುವುದು ಕಂಡುಬಂದಿದ್ದು, ಈ ಪೈಕಿ 89, 90 ಎರಡು ನಿವೇಶನಗಳು ಬಿಡುಗಡೆಗೊಂಡಿದ್ದು, 88, 91 ಬಾಕಿ ಇರುತ್ತದೆ. ಬಿಡುಗಡೆಗೊಂಡ ನಿವೇಶನಗಳಲ್ಲಿ ಕಟ್ಟಡ ನಿರ್ಮಿಸಲು ಈಗಾಗಲೇ ಈ ಕಛೇರಿಯಿಂದ ತಾಂತ್ರಿಕ ಅನುಮೋದನೆ ನೀಡಲಾಗುತ್ತಿರುತ್ತದೆ. ಆದರೆ, ಗೊಂದಿಬಸವನಹಳ್ಳಿ ಗ್ರಾಮವು ಕುಶಾಲನಗರ ಯೋಜನಾ ಪ್ರಾಧಿಕಾರದ ವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ. ಈ ಬಗ್ಗೆ ಮಾನ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ ಇವರ ಮಾರ್ಗದರ್ಶನ ಪಡೆಯುವುದು ಸೂಕ್ತವಾಗಿರುತ್ತದೆ. ಅಲ್ಲದೆ, ದಿನಾಂಕ:28–10–2016 ರಂದು ಮಾರ್ಪಡಿತ ನಕ್ಷೆಗೆ ಅನುಮೋದನೆ ನೀಡುವಾಗ ಷರತ್ತಿನ ಸಂಖ್ಯೆ(1)ರಲ್ಲಿ ನೀಡಿರುವ ಮಂಜುರಾತಿಯ ದಿನದಿಂದ ಎರಡು ವರ್ಷಗಳವರೆಗೆ ಮಾತ್ರ ಜಾರಿಯಲ್ಲಿರುತ್ತದೆ ಈ ಅವಧಿಯಲ್ಲಿ ವಿನ್ಯಾಸದ ಅಭಿವೃದ್ಧಿ ಪೂರ್ಣಗೊಳ್ಳದಿದ್ದಲ್ಲಿ ವಿನ್ಯಾಸ ಅನುಮೋದನೆಯನ್ನು ನವೀಕರಿಸಿಕೊಳ್ಳಬೇಕಾಗಿರುತ್ತದೆ ಎಂಬ ಷರತ್ತನ್ನು ವಿಧಿಸಲಾಗಿದೆ.

ಅರ್ಜಿದಾರರು ವಿನ್ಯಾಸವನ್ನು ಅಭಿವೃದ್ಧಿಪಡಿಸಿರುವ ಬಗ್ಗೆ ಸಂಬಂಧಪಟ್ಟ ಇಲಾಖೆಗಳು ನೀಡಿರುವ ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ಹಾಗೂ ಇತ್ತೀಚಿನ ಇ.ಸಿ. ಪ್ರತಿಯನ್ನು ಸಲ್ಲಿಸಬೇಕಿರುತ್ತದೆ. ಪ್ರಶ್ನಿತ ಜಮೀನಿನ ಸ್ಥಳಪರಿಶಿಲನೆಯನ್ನು ದಿನಾಂಕ:30–06–2023 ರಂದು ಮಾಡಲಾಗಿದ್ದು, ಸದರಿ ವಿನ್ಯಾಸ ನಕ್ಷೆಯಲ್ಲಿ ಬರುವ ಎಲ್ಲಾ ನಿವೇಶನಗಳ ಅಳತೆಗಳನ್ನು ಮಾಡುವುದು ಬಾಕಿ ಇರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣಿಸಿ, ಸರ್ಕಾರದ ಮಾರ್ಗದರ್ಶನ ಪಡೆದುಕೊಂಡು ಪ್ರಶ್ನಿತ ಜಮೀನಿನ ವಸತಿ ವಿನ್ಯಾಸ ನಕ್ಷೆಯನ್ನು ವಲಯ ನಿಯಮಾವಳಿಗಳನ್ವಯ ಮರುಮಾರ್ಪಡಿಸಿಕೊಳ್ಳುವುದು ಸೂಕ್ತವಾಗಿರುತ್ತದೆ. ಸದರಿ ವಿಷಯವನ್ನು ಸಭೆಯ ಚರ್ಚೆಗೆ ಮಂಡಿಸಿದೆ.

ನಿರ್ಣಯ: ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಿ, ಸದಸ್ಯಕಾರ್ಯದರ್ಶಿಗಳ ಅಭಿಪ್ರಾಯವನ್ನು ಪರಿಗಣಿಸಲಾಯಿತು. ಮುಖ್ಯಾಧಿಕಾರಿ, ಪುರಸಭೆ ಇವರು ಮಾತನಾಡಿ ಸದರಿ ಜಮೀನು ಪ್ರಸ್ತುತ ಕುಶಾಲನಗರ ಪುರಸಭೆಯ ವ್ಯಾಪ್ತಿಗೆ ಒಳಪಡುವ ಕಾರಣದಿಂದ ಸ್ಥಳೀಯ ಯೋಜನಾ ಪ್ರದೇಶದ ಕಾರ್ಯವ್ಯಾಪ್ತಿಯ ಹೊರಗೆ ಕೇವಲ ಎರಡು ನಿವೇಶನಗಳು ಬಿಡುಗಡೆ ಮಾಡಲು ಬಾಕಿ ಉಳಿದಿರುವ ಕಾರಣ ಸದರಿ ಪ್ರಸ್ತಾವನೆಯನ್ನು ವಿಲೇ ಇಡುವ ಬದಲು ಪುರಸಭೆ ವತಿಯಿಂದಲೇ ಈ ಎರಡು ನಿವೇಶನಗಳನ್ನು ಬಿಡುಗಡೆ ಮಾಡಬಹುದೆಂದು ಹಾಗೂ ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶವನ್ನು ವಿಸ್ತರಿಸುವ ಕಾರ್ಯವನ್ನು ಶೀಘ್ರವಾಗಿ ಕೈಗೊಳ್ಳುವಂತೆ ಅಭಿಪ್ರಾಯ ವ್ಯಕ್ತಪಡಿಸಿದರು. ಆದರೆ, ನಾಗರೀಕ ಸೌಲಭ್ಯ ನಿವೇಶನವನ್ನು ಈಗಾಗಲೇ ಯೋಜನಾ ಪ್ರಾಧಿಕಾರಕ್ಕೆ ಹಸ್ತಾಂತರಿಸಿರುವುದಿರಂದ ಆ ನಿವೇಶನವು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ

ಇಲ್ಲದೇ ಇರುವ ಕಾರಣ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಅಭಿಪ್ರಾಯ ಪಡೆದ ನಂತರ ಕ್ರಮಕೈಗೊಳ್ಳುವುದು ಸೂಕ್ತವೆಂದು ಅಧ್ಯಕ್ಷರು ತಿಳಿಸಿದರು.

ಅಂತಿಮವಾಗಿ ಕೂಲಕುಂಷವಾಗಿ ಚರ್ಚಿಸಿದ ನಂತರ, ಸದರಿ ವಿಷಯದ ಬಗ್ಗೆ ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಮಡಿಕೇರಿ ಇವರಿಗೆ ವಿವರಣೆ ನೀಡಿ, ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶದ ಹೊರಭಾಗದಲ್ಲಿರುವ ಎರಡು ನಿವೇಶನಗಳನ್ನು ಬಿಡುಗಡೆಗೊಳಿಸುವಂತೆ ಕೋರಿ ಪತ್ರ ಬರೆಯಬೇಕೆಂದು ಹಾಗೂ ನಾಗರೀಕ ಸೌಲಭ್ಯದ ವಿಸ್ತೀರ್ಣದಲ್ಲಿ ವ್ಯತ್ಯಾಸ ಉಂಟಾಗಿರುವುದರಿಂದ ಹೆಚ್ಚುವರಿ ವಿಸ್ತೀರ್ಣವನ್ನು ಪ್ರಾಧಿಕಾರಕ್ಕೆ ತಿದ್ದುಪಡಿ ಮೂಲಕ ಹಸ್ತಾಂತರಿಸಿದ ನಂತರ ಸದರಿ ವಸತಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೊದನೆ ನೀಡುವಂತೆ ಹಾಗೂ ಉಳಿಕೆ ನಿವೇಶನಗಳನ್ನು ಬಿಡುಗಡೆಗೊಳಿಸುವಂತೆ ಸಭೆಯು ಸದಸ್ಯಕಾರ್ಯದರ್ಶಿಯವರಿಗೆ ಸೂಚಿಸಿ ನಿರ್ಣಯಿಸಿತು.

ವಿಷಯ ಸಂಖ್ಯೆ(5): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ ಕೂಡ್ಲೂರು ಗ್ರಾಮದ ಸ.ನಂ. 60/2 ರಲ್ಲಿ 6.92 ಎಕರೆ ವಿಸ್ತೀರ್ಣದ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡುವಂತೆ ಹಾಗೂ ನಿವೇಶನಗಳನ್ನು ಬಿಡುಗಡೆಗೊಳಿಸುವಂತೆ ಕೋರಿರುವ ಬಗ್ಗೆ. (**ಅರ್ಜಿದಾರರು:- ಶ್ರೀ ಶಿವಲಿಂಗಯ್ಯ**).

ಟಿಪ್ಪಣಿ: ಪ್ರಶ್ನಿತ ಜಮೀನನ್ನು ಮಾನ್ಯ ಜಿಲ್ಲಾದಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರು ದಿನಾಂಕ:26-12-2011 ರಂದು ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ ಆದೇಶಿಸಿರುತ್ತಾರೆ. ಸದರಿ ಜಮೀನಿನ ವಸತಿ ಉದ್ದೇಶದ ಕರಡು ವಿನ್ಯಾಸ ನಕ್ಷೆಯನ್ನು ಅಭಿವೃದ್ಧಿಪಡಿಸುವ ಸಂಬಂಧ ಕಾರ್ಯಾದೇಶವನ್ನು ದಿನಾಂಕ:24-12-2020 ರಂದು ಈ ಕಛೇರಿಯಿಂದ ನೀಡಲಾಗಿದೆ. ನಂತರ ಈ ವಿನ್ಯಾಸ ಅನುಮೋದನೆಯನ್ನು ರದ್ದುಪಡಿಸಿ, ಜಮೀನಿನ ಪಶ್ಚಿಮ ದಿಕ್ಕಿನಲ್ಲಿರುವ ಗುಡ್ಡ ಜರುಗದಂತೆ ಸೂಕ್ತ Retaining wall ನಿರ್ಮಿಸುವಂತೆ ಆದೇಶ ಪತ್ರದಲ್ಲಿ ಷರತ್ತು ವಿಧಿಸಿ ಮತ್ತು ಜಮೀನಿನ ಇಳಿಜಾರು ಕತ್ತರಿಸುವಿಕೆಯು ಯಾವುದೇ ಕಾರಣಕ್ಕೂ 45 ಡಿಗ್ರಿಯನ್ನು ಮೀರತಕ್ಕದ್ದಲ್ಲ ಎಂಬ ಷರತ್ತನ್ನು ವಿಧಿಸಿ, ಕಂದಾಯ ಇಲಾಖೆಯಿಂದ ದೃಢೀಕರಿಸಿ ನೀಡಿರುವ ಸರ್ವೆ ನಕ್ಷೆಯ ಎಲ್ಲೆಗಳ ಆಧಾರದ ಮೇಲೆ ಪರಿಷ್ಕೃತ ಕರಡು ವಸತಿ ವಿನ್ಯಾಸ ನಕ್ಷೆಗೆ ದಿನಾಂಕ:29-09-2021 ರಂದು ಅನುಮೋದನೆ ನೀಡಲಾಗಿದೆ. ಈ ಸಂಬಂಧ ಅರ್ಜಿದಾರರು ಅಫಿಡೆವಿಟ್ ಸಲ್ಲಿಸಿದ್ದು, ಅದರಲ್ಲಿ ಗುಡ್ಡ ಜರುಗದಂತೆ ಸೂಕ್ತವಾದ (Retaining wall) ತಡೆಗೋಡೆ ನಿರ್ಮಿಸುತ್ತೇವೆ ಒಂದು ವೇಳೆ ಸದರಿ ಗುಡ್ಡಗಳು ಜರುಗಿ ಯಾವುದೇ ವಿಕೋಪ ಅನಾಹುತಗಳ ಆದಲ್ಲಿ ಹಾಗೂ ನಿವೇಶನ ಖರೀದಿಸುವವರಿಗೆ ಮತ್ತು ಅಕ್ಕಪಕ್ಕದ ನಿವಾಸಿಗಳಿಗೆ ತೊಂದರೆ ಉಂಟಾದಲ್ಲಿ ಅದರ ಸಂಪೂರ್ಣ ಜವಾಬ್ದಾರಿ ಮತ್ತು ಹೊಣಗಾರಿಕೆಯನ್ನು ನಾನೇ ವಹಿಸಿಕೊಂಡಿರುತ್ತೇನೆ ಹಾಗೂ ಯೋಜನಾ ಪ್ರಾಧಿಕಾರವು ಇದಕ್ಕೆ ಜವಾಬ್ದಾರರಾಗಿರುವುದಿಲ್ಲ ಎಂದು ಪ್ರಮಾಣೀಕರಿಸಿರುತ್ತಾರೆ. ಅರ್ಜಿದಾರರು ದಿನಾಂಕ:04-07-2023 ರಂದು ಈ ಕಛೇರಿಗೆ ಮನವಿ ಸಲ್ಲಿಸಿ, ಅಭಿವೃದ್ಧಿ ಕಾಮಗಾರಿಗಳಾದ ರಸ್ತೆ, ಚರಂಡಿ, ವಿದ್ಯುಚ್ಛಕ್ತಿ, ನೀರು ಸರಬರಾಜು ಮತ್ತು ಒಳಚರಂಡಿ ಹಾಗೂ ಉದ್ಯಾನವನ ಅಭಿವೃದ್ಧಿ ಕಾಮಗಾರಿಗಳನ್ನು ಮುಕ್ತಾಯಗೊಳಿಸಿರುವ ಬಗ್ಗೆ ಸಂಬಂಧಪಟ್ಟ ಇಲಾಖೆಗಳಾದ ಲೋಕೊಪಯೋಗಿ ಇಲಾಖೆ, ಚೆಸ್ಕಾಂ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ತೋಟಗಾರಿಕೆ ಇಲಾಖೆಗಳಿಂದ ಕಾಮಗಾರಿ ಮುಕ್ತಾಯ ದೃಢೀಕರಣ ಪತ್ರವನ್ನು ಪಡೆದು ಸಲ್ಲಿಸಿದ್ದು, ಅಂತಿಮ ಅನುಮೋದನೆಯನ್ನು ನೀಡಬೇಕೆಂದು ಕೋರಿರುತ್ತಾರೆ. ಆದ್ದರಿಂದ ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಪ್ರಶ್ನಿತ ಜಮೀನಿನ ಸ್ಥಳಪರಿಶಿಲನೆಯನ್ನು ಮಾಡಲಾಗಿದ್ದು, ಜಮೀನಿನ ಪಶ್ಚಿಮ ದಿಕ್ಕಿನಲ್ಲಿರುವ ಗುಡ್ಡ ಜರುಗದಂತೆ ಸೂಕ್ತವಾದ ತಡೆಗೋಡೆ (Retaining wall) ಯನ್ನು

ಅರ್ಜಿದಾರರು ಇದುವರೆಗೂ ನಿರ್ಮಿಸಿರುವುದಿಲ್ಲ ಮತ್ತು ಉದ್ಯಾನವನ ಅಭಿವೃದ್ಧಿ ಕಾಮಗಾರಿಯನ್ನು ಮುಕ್ತಾಯಗೊಳಿಸಿರುವ ದೃಢೀಕರಣ ಪತ್ರವನ್ನು ಪಡೆದು ಸಲ್ಲಿಸಿದ್ದು, ಸ್ಥಳದಲ್ಲಿ ಯಾವುದೇ ಅಭಿವೃದ್ಧಿ ಆಗಿರುವುದಿಲ್ಲ. ಸದರಿ ವಿನ್ಯಾಸ ನಕ್ಷೆಯಲ್ಲಿ ಬರುವ ಎಲ್ಲಾ ನಿವೇಶನಗಳ ಅಳತೆಗಳನ್ನು ಮಾಡುವುದು ಬಾಕಿ ಇರುತ್ತದೆ. ಅರ್ಜಿದಾರರು ಸದರಿ ವಿನ್ಯಾಸದಲ್ಲಿ ಬರುವ ರಸ್ತೆ, ಉದ್ಯಾನವನಕ್ಕೆ ಕಾಯ್ದಿರಿಸಿದ ಜಮೀನನ್ನು ಸ್ಥಳೀಯ ಸಂಸ್ಥೆಗೆ ಹಾಗೂ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ಜಮೀನನ್ನು ಯೋಜನಾ ಪ್ರಾಧಿಕಾರಕ್ಕೆ ಪರಿತ್ಯಾಜನ ಪತ್ರದ ಮುಖೇನ ಹಸ್ತಾಂತರಿಸುವುದು ಬಾಕಿ ಇರುತ್ತದೆ. ಆದ್ದರಿಂದ ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

ನಿರ್ಣಯ: ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, ಜಮೀನಿನ ಪಶ್ಚಿಮ ದಿಕ್ಕಿನಲ್ಲಿರುವ ಗುಡ್ಡ ಜರುಗದಂತೆ ಸೂಕ್ತವಾದ ತಡೆಗೋಡೆ (Retaining wall) ಯನ್ನು ಅರ್ಜಿದಾರರು ಇದುವರೆಗೂ ನಿರ್ಮಿಸಿರುವುದಿಲ್ಲ ಅದಲ್ಲದೆ ಉದ್ಯಾನವನವನ್ನು ಅಭಿವೃದ್ಧಿಪಡಿಸಿರುವುದಿಲ್ಲ. ಇದರ ಬಗ್ಗೆ ಚರ್ಚಿಸಲು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಗ್ರಾಮಪಂಚಾಯಿತಿ ಇವರಿಗೆ ಮುಂದಿನ ಪ್ರಾಧಿಕಾರದ ಸಭೆಗೆ ಹಾಜರಾಗಲು ಪತ್ರ ಬರೆದು, ಮುಂದಿನ ಸಭೆಯಲ್ಲಿ ಸದರಿ ಕಡತದ ಬಗ್ಗೆ ಚರ್ಚಿಸಲು ಸಭೆಯು ಸದಸ್ಯ ಕಾರ್ಯದರ್ಶಿಯವರಿಗೆ ಸೂಚಿಸಿ ನಿರ್ಣಯಿಸಿತು.

ವಿಷಯ ಸಂಖ್ಯೆ(6): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ ಕೂಡ್ಲೂರು ಗ್ರಾಮದ ಸ.ನಂ. 68/14 ರಲ್ಲಿ 0.27 ಎಕರೆ ಮತ್ತು ಸ.ನಂ. 68/13 ರಲ್ಲಿ 0.23 ಎಕರೆ ಒಟ್ಟು 0.50 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಉದ್ದೇಶದ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ಕೋರಿರುವ ಬಗ್ಗೆ. **(ಶ್ರೀ ಎಸ್. ರಂಗಸ್ವಾಮಿ)**

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ ಕಡತವನ್ನು ಪರಿಶೀಲಿಸಲಾಗಿ, ಸದರಿ ಜಮೀನಿನ ವಸತಿ ಏಕ–ನಿವೇಶನ ವಿನ್ಯಾಸ ಅನುಮೋದನೆ ನೀಡುವಂತೆ ದಿನಾಂಕ:29–01–2021 ರಂದು ಪ್ರಸ್ತಾವನೆಯನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕೂಡುಮಂಗಳೂರು ಗ್ರಾಮಪಂಚಾಯಿತಿ ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ದಿನಾಂಕ:05–02–2021 ರಂದು ನಡೆದ ಪ್ರಾಧಿಕಾರದ 42ನೇ ಸಭೆಯಲ್ಲಿ ವಿಷಯವನ್ನು ಮಂಡಿಸಲಾಗಿದ್ದು, ಪ್ರಶ್ನಿತ ಜಮೀನನ್ನು ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ರವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಭೂಪರಿ/224/2012–13. ದಿನಾಂಕ: 16–04–2013 ರಲ್ಲಿ ವಸತಿ ಉದ್ದೇಶಕ್ಕೆ ಭೂಪರಿವರ್ತನೆ ಮಂಜೂರು ಮಾಡಿ ಆದೇಶಿಸಿದ್ದು, ಸದರಿ ಭೂ–ಪರಿವರ್ತನಾ ಆದೇಶದಲ್ಲಿ ಜಮೀನಿನ ಭೂ–ಪರಿವರ್ತನೆಯಾಗಿ ಎರಡು ವರ್ಷದೊಳಗೆ ಕಟ್ಟಡ ನಿರ್ಮಿಸುವುದು ತಪ್ಪಿದಲ್ಲಿ ಭೂ–ಪರಿವರ್ತನಾ ಆದೇಶ ತಾನೇ ರದ್ದಾಗುತ್ತದೆ ಎಂಬ ಷರತ್ತು ವಿಧಿಸಲಾಗಿರುವುದರಿಂದ ಸದರಿ ಭೂ–ಪರಿರ್ತನಾ ಆದೇಶವು ಊರ್ಜಿತವಾಗಿರುವ ಬಗ್ಗೆ ಕಂದಾಯ ಇಲಾಖೆಯಿಂದ ದೃಢೀಕರಿಸಿಕೊಂಡ ನಂತರ, ಪ್ರಾಧಿಕಾರದಿಂದ ಸ್ಥಳ ಪರಿಶೀಲಿಸಿ ಕಡತದಲ್ಲಿ ಅಧ್ಯಕ್ಷರ ಸಹಿ ಪಡೆದು ವಲಯ ನಿಯಮಾನುಸಾರ ಏಕ–ನಿವೇಶನ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಗಿರುತ್ತದೆ. ಅದರಂತೆ ಅರ್ಜಿದಾರರಿಗೆ ದಿನಾಂಕ:09–02–2021 ರಂದು ಹಿಂಬರಹ ನೀಡಿ ಭೂಪರಿವರ್ತನಾ ಆದೇಶವನ್ನು ಕಂದಾಯ ಇಲಾಖೆಯಿಂದ ನವೀಕರಿಸಿ ಸಲ್ಲಿಸಬೇಕೆಂದು ಮತ್ತು ಕಂದಾಯ ಇಲಾಖೆಯಿಂದ ದೃಢೀಕರಿಸಿರುವ ಸರ್ವೆ ನಕ್ಷೆಯನ್ನು ಹಾಗೂ ಇ.ಸಿ ಪ್ರತಿಯನ್ನು ಸಲ್ಲಿಸಬೇಕೆಂದು ತಿಳಿಸಲಾಗಿರುತ್ತದೆ. ಅದರಂತೆ ಅರ್ಜಿದಾರರು ದಿನಾಂಕ: 01–09–2021 ರಂದು ಸದರಿ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ. ಪ್ರಸ್ತಾವಿತ ಜಮೀನಿನ ಮೇಲೆ ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ(ತಾತ್ಕಾಲಿಕ) ಅನ್ವಯ ನಕ್ಷೆಯಲ್ಲಿ ಪ್ರಸ್ತಾವಿತ ರಸ್ತೆ ಹಾದುಹೋಗುತ್ತಿರುವುದು ಕಂಡುಬಂದಿರುವುದರಿಂದ ಈ ಬಗ್ಗೆ ಪರಿಶೀಲಿಸಲು ಮತ್ತೊಮ್ಮೆ ಸ್ಥಳ ಪರಿಶೀಲನೆಗೆ ಅನುವು ಮಾಡಿಕೊಡುವಂತೆ ದಿನಾಂಕ: 01–10–2021 ರಂದು ಅರ್ಜಿದಾರರಿಗೆ ಮತ್ತೊಮ್ಮೆ ಹಿಂಬರಹ ನೀಡಿರುವುದು ಕಂಡುಬಂದಿದೆ.

ಮುಂದುವರೆದು, ಅರ್ಜಿದಾರರು ಏಪ್ರಿಲ್ 2023ರ ಮಾಹೆಯಲ್ಲಿ ಮೌಖಿಕವಾಗಿ ಸದರಿ ಕಡತದ ಬಗ್ಗೆ ಕ್ರಮವಹಿಸುವಂತೆ ಕೋರಿರುತ್ತಾರೆ. ಆದ್ದರಿಂದ ದಿನಾಂಕ:24–04–2023 ರಂದು ಪ್ರಶ್ನಿತ ಜಮೀನಿನ ಸ್ಥಳಪರಿಶೀಲನೆಯನ್ನು ಮಾಡಲಾಗಿದ್ದು, ಅರ್ಜಿದಾರರಿಗೆ ದಿನಾಂಕ:06–05–2023 ರಂದು ಹಿಂಬರಹ ನೀಡಿ ಇತ್ತೀಚಿನ ಆರ್.ಟಿ.ಸಿ, ಇ.ಸಿ. ಪ್ರತಿ (ದಿನಾಂಕ: 12–08–2021 ರಿಂದ ಇಲ್ಲಿಯವರೆಗೆ), ಸರ್ವೆ ನಕ್ಷೆ (ಪರವಾನಿಗೆ ಭೂಮಾಪಕರು ತಯಾರಿಸಿದ ಹಾಗೂ ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ), ಉತಾರು ನಕ್ಷೆ (ಮೂಲ ಪ್ರತಿ ಮತ್ತು ನಕಲು ಪ್ರತಿ), ಮ್ಯುಟೇಶನ್ ಪ್ರತಿ (2013–14 ರಿಂದ ಇಲ್ಲಿಯವರೆಗೆ), ಆಕಾರ್ ಬಂದ್ (ಉತಾರು), ಗ್ರಾಮ ನಕ್ಷೆ ಮತ್ತು ಪರಿಷ್ಕೃತ ವಿನ್ಯಾಸ ನಕ್ಷೆಯನ್ನು ಸಲ್ಲಿಸುವಂತೆ ತಿಳಿಸಲಾಗಿದೆ. ಇವುಗಳ ಪೈಕಿ ಅರ್ಜಿದಾರರು ಆರ್.ಟಿ.ಸಿ, ಉತಾರು ನಕ್ಷೆ, ಆಕಾರ್ ಬಂದ್ (ಉತಾರು) ಮಾತ್ರ ಸಲ್ಲಿಸಿದ್ದು, ಇತ್ತೀಚಿನ ಇ.ಸಿ. ಪ್ರತಿ ಮ್ಯುಟೇಶನ್ ಪ್ರತಿ ಮತ್ತು ಗ್ರಾಮ ನಕ್ಷೆಗಳನ್ನು ಸಲ್ಲಿಸಿರುವುದಿಲ್ಲ. ನಂತರ ದಿನಾಂಕ:16–06–2023 ರಂದು ಅರ್ಜಿದಾರರಿಗೆ ಮತ್ತೊಮ್ಮೆ ಹಿಂಬರಹ ನೀಡಿ ಅಂತಿಮ ಮಹಾಯೋಜನೆ ನಕ್ಷೆಯಂತೆ 12.0ಮೀ ಅಗಲದ ಉದ್ದೇಶಿತ ರಸ್ತೆಯು ಹಾದುಹೋಗುತ್ತಿರುವ ಬಗ್ಗೆ ಈ ಕಛೇರಿಯಿಂದ ಪರಿಶೀಲಿಸಿಕೊಂಡು ಪರಿಷ್ಕೃತ ವಿನ್ಯಾಸ ನಕ್ಷೆಯನ್ನು ಹಾಗೂ ಉಳಿದ ದಾಖಲಾತಿಗಳನ್ನು ಸಲ್ಲಿಸುವಂತೆ ತಿಳಿಸಲಾಗಿದೆ. ಅರ್ಜಿದಾರರು ದಿನಾಂಕ:20–06–2023 ರಂದು ಇ.ಸಿ. ಪ್ರತಿ ಮತ್ತು ಗ್ರಾಮ ನಕ್ಷೆಯನ್ನು ಮಾತ್ರ ಸಲ್ಲಿಸಿದ್ದು, ಮ್ಯುಟೇಷನ್ ಪ್ರತಿ ಹಾಗೂ ಪರಿಷ್ಕೃತ ಏಕನಿವೇಶನ ನಕ್ಷೆಯನ್ನು ಸಲ್ಲಿಸಿರುವುದಿಲ್ಲ. ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಟಿಪ್ಪಣಿಯಲ್ಲಿ ವಿವರಿಸಿದಂತೆ ಪ್ರಶ್ನಿತ ಜಮೀನಿನಲ್ಲಿ ಅಂತಿಮ ಮಹಾಯೋಜನೆ ನಕ್ಷೆಯಂತೆ 12.0ಮೀ ಅಗಲದ ಉದ್ದೇಶಿತ ರಸ್ತೆಯು ಹಾದುಹೋಗುತ್ತಿದ್ದು, ಸದರಿ ರಸ್ತೆಯನ್ನು ಅಳವಡಿಸಿರುವ ಪರಿಷ್ಕೃತ ವಿನ್ಯಾಸ ನಕ್ಷೆಯನ್ನು ಅರ್ಜಿದಾರರು ಸಲ್ಲಿಸಬೇಕಿರುತ್ತದೆ. ಅಲ್ಲದೆ, ಮ್ಯುಟೇಷನ್ ಪ್ರತಿಯನ್ನು ಸಲ್ಲಿಸಲು ಸಂಬಂಧಪಟ್ಟ ಇಲಾಖೆಯ ತಾಂತ್ರಿಕ ದೋಷದ ಕಾರಣ ಹೇಳಿ ಮ್ಯುಟೇಷನ್ ಪ್ರತಿ ಸಲ್ಲಿಸಿರುವುದಿಲ್ಲ.

ಸದರಿ ಜಮೀನಿನ ಉತ್ತರ ದಿಕ್ಕಿನಲ್ಲಿರುವ ರಾಜ್ಯ ಹೆದ್ದಾರಿ–91 ಕ್ಕೆ ಹೊಂದಿಕೊಂಡಿರುವ ಸರ್ವೆ ನಂಬರ್ 68/14 ಮತ್ತು 68/13 ಗಳ ಪೈಕಿ ಸರ್ವೆ ನಂಬರ್ 68/14 ರ ಜಮೀನಿಗೆ ರಾಜ್ಯ ಹೆದ್ದಾರಿಯ ನೇರ ಸಂಪರ್ಕ ಇರುವುದಿಲ್ಲ. ಅದರ ಬದಲಾಗಿ 68/14 ರ ಜಮೀನಿನ ಉತ್ತರ ದಿಕ್ಕಿನಲ್ಲಿ (ಎದುರಾಗಿ) ಸ.ನಂ. 68/5 ರ ಜಮೀನು ಇರುತ್ತದೆ. ಇದನ್ನು ಅರ್ಜಿದಾರರು ಸಲ್ಲಿಸಿರುವ ಉತ್ತಾರು ನಕ್ಷೆಯಲ್ಲಿ ದೃಢಪಡಿಸಿಕೊಳ್ಳಬಹುದಾಗಿದೆ. ಅದಲ್ಲದೆ ಅರ್ಜಿದಾರರು ಸಲ್ಲಿಸಿರುವ ಕ್ರಯಪತ್ರದಲ್ಲಿ **"***ಸರ್ವೆ ನಂಬರ್ 68/5ರ ಹದ್ದುಬಸ್ತು ಸರ್ಕಾರಿ ರಸ್ತೆಯ ಮಧ್ಯಭಾಗದಿಂದ 55 (ಐವತ್ತೈದು) ಅಡಿ ಮಾರ್ಜಿನ್ ಜಾತಾ ಪ್ರಾರಂಭವಾಗುವುದು, ರಸ್ತೆ ಮಾರ್ಜಿನ್ ಜಾಗದ ಸ್ವಾಧೀನ ಮಾರಾಟದಾರರಿಗೆ ಸೇರಿರುವುದಿಲ್ಲ, ಮುಂದೆ ರಸ್ತೆ ಮಾರ್ಜಿನ್ ಜಾಗದ ಸರ್ಕಾರಿ ಪರಿಹಾರ ಮೊಬಲಗು ಮಾರಾಟದಾರರಿಗೆ ಸೇರಿರುತ್ತದೆ***"** ಎಂದು ಕ್ರಯಪತ್ರದಲ್ಲಿ ನಮೂದಾಗಿರುತ್ತದೆ. ದಿನಾಂಕ:01–07–2023 ರಂದು ಈ ಕಛೇರಿಯಿಂದ ಭೂದಾಖಲೆಗಳ ಸಹಾಯಕ ನಿರ್ದೇಶಕರು, ಸೋಮವಾರಪೇಟೆ ತಾಲ್ಲೂಕು ಇವರಿಗೆ ಪತ್ರ ಬರೆದು ಪ್ರಶ್ನಿತ ಜಮೀನಿನ ಸರ್ವೆ ನಕ್ಷೆಯನ್ನು ನೀಡುವಂತೆ ಕೋರಲಾಗಿದ್ದು, ಅರ್ಜಿದಾರರು ಸರ್ವೆ ನಕ್ಷೆಯನ್ನು ಸಲ್ಲಿಸಿರುತ್ತಾರೆ. ಸ.ನಂ. 68/5ರ ಮಾಲೀಕರಾದ ಶ್ರೀಮತಿ ಜಯಂತಿಯವರು ದಿನಾಂಕ: 01–07–2023 ರಂದು ರಸ್ತೆ ಬಿಟ್ಟುಕೊಡಲು ಒಪ್ಪಿಗೆ ಪತ್ರ ನೀಡಿರುತ್ತಾರೆ. ಆದ್ದರಿಂದ ಅರ್ಜಿದಾರರು ಮ್ಯುಟೇಷನ್ ಪ್ರತಿ, ಪರಿಷ್ಕೃತ ವಿನ್ಯಾಸ ನಕ್ಷೆಯನ್ನು ಸಲ್ಲಿಸಿದ ನಂತರ ಪರಿಶೀಲಿಸಿ, ಸದರಿ ಜಮೀನಿನ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಬಹುದಾಗಿದ್ದು, ವಿಷಯವನ್ನು ಸಭೆಗೆ ಮಂಡಿಸಿದೆ.

ನಿರ್ಣಯ: ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, ಅರ್ಜಿದಾರರು ಮ್ಯುಟೇಷನ್ ಪ್ರತಿ, ಪರಿಷ್ಕೃತ ವಿನ್ಯಾಸ ನಕ್ಷೆಯನ್ನು ಸಲ್ಲಿಸಿದ ನಂತರ ಪರಿಶೀಲಿಸಿ, ಸದರಿ ಜಮೀನಿನ ವಸತಿ ಉದ್ದೇಶದ ಏಕ–

ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯ ಸಂಖ್ಯೆ(7): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ ಕೂಡ್ಲೂರು ಗ್ರಾಮದ ಸ.ನಂ. 9/5 ರಲ್ಲಿ 3.00 ಎಕರೆ ವಿಸ್ತೀರ್ಣದ ಜಮೀನಿನ ಕೈಗಾರಿಕೆ (ಕಾಫೀ ಕ್ಯೂರಿಂಗ್ ವರ್ಕ್ಸ್) ಉದ್ದೇಶದ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ಕೋರಿರುವ ಬಗ್ಗೆ (**ಅರ್ಜಿದಾರರು: ಶ್ರೀ ಈ. ಜವಹಾರ್**).

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ ಸದರಿ ಜಮೀನಿನ ವಸತಿ ಏಕ–ನಿವೇಶನ ವಿನ್ಯಾಸ ಅನುಮೋದನೆ ನೀಡುವಂತೆ ದಿನಾಂಕ:07–06–2023 ರಂದು ಪ್ರಸ್ತಾವನೆಯನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕೂಡುಮಂಗಳೂರು ಗ್ರಾಮಪಂಚಾಯಿತಿ ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಪರಿಶೀಲಿಸಲಾಗಿ, ಅರ್ಜಿದಾರರು ಭೂಪರಿವರ್ತನೆ ಆದೇಶದ ಪ್ರತಿ, ಆರ್.ಟಿ.ಸಿ, ಪಿ.ಟಿ.ಶೀಟ್(ನಕಲು), ಆಕಾರ್‌ಬಂದ್(ಉತಾರು) ಮ್ಯುಟೇಷನ್ ಪ್ರತಿ, ಕ್ರಯಪತ್ರಗಳನ್ನು ಸಲ್ಲಿಸಿರುತ್ತಾರೆ. ಅರ್ಜಿದಾರರಿಗೆ ದಿನಾಂಕ:16–06–2023 ರಂದು ಹಿಂಬರಹ ನೀಡಿ ಸರ್ವೆ ನಕ್ಷೆ (ಪರವಾನಿಗೆ ಭೂಮಾಪಕರು ತಯಾರಿಸಿದ ಹಾಗೂ ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ), ಆಕಾರ್‌ಬಂದ್ (ಮೂಲಪ್ರತಿ), ಇ.ಸಿ(ನಮೂನೆ 15), ಗ್ರಾಮನಕ್ಷೆ, ದೃಢೀಕೃತ ಕ್ರಯಪತ್ರ, ಕರಡು ವಿನ್ಯಾಸ ನಕ್ಷೆ, ಅಫಿಡೆವಿಟ್ ಮತ್ತು ಆಧಾರ್ ಕಾರ್ಡ್ ದಾಖಲಾತಿಗಳನ್ನು ಸಲ್ಲಿಸುವಂತೆ ತಿಳಿಸಲಾಗಿದೆ. ಅರ್ಜಿದಾರರು ದಿನಾಂಕ: 04–07–2023 ರಂದು ದಾಖಲಾತಿಗಳನ್ನು ಸಲ್ಲಿಸಿದ್ದು, ಪರಿಶೀಲಿಸಲಾಗಿ ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆಯನ್ನು ಸಲ್ಲಿಸಿರುವುದಿಲ್ಲ. ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಾಗಿ ಪ್ರಶ್ನಿತ ಜಮೀನನ್ನು ಉಪವಿಭಾಗಾಧಿಕಾರಿಗಳು, ಮಡಿಕೇರಿ ಉಪವಿಭಾಗ ಇವರ ಆದೇಶ ಸಂ: ಪರಿವರ್ತನೆ 84:96–97 ದಿನಾಂಕ: 31–01–1998 ರಂದು ಕೈಗಾರಿಕೆ ಉದ್ದೇಶಕ್ಕಾಗಿ ಭೂಪರಿವರ್ತಿಸಿ ಆದೇಶಿಸಿರುತ್ತಾರೆ. ನಂತರ ಮಾನ್ಯ ಜಿಲ್ಲಾಧಿಕಾರಿಗಳು ಕೊಡಗು ಜಿಲ್ಲೆ, ಮಡಿಕೇರಿ ಇವರು ಅಫಡಿವಿಟ್ ಆಧಾರದಲ್ಲಿ ಅಧಿಕೃತ ಜ್ಞಾಪನ ಪತ್ರ ಸಂ: 338998 ದಿನಾಂಕ: 10–05–2022 ರಂದು ಕೈಗಾರಿಕೆ ಉದ್ದೇಶಕ್ಕೆ ಭೂಪರಿರ್ತಿಸಿ ಆದೇಶಿಸಿರುತ್ತಾರೆ. ಪಸ್ತಾವಿತ ಜಮೀನು ಅಂತಿಮ ಮಹಾಯೋಜನೆ ನಕ್ಷೆಯಲ್ಲಿ ಕೈಗಾರಿಕಾ ವಲಯದಲ್ಲಿದೆ.

ಪ್ರಸ್ತಾವಿತ ಜಮೀನು ಪಶ್ಚಿಮ ದಿಕ್ಕಿನಲ್ಲಿ 10.40ಮೀ ಅಗಲದ ರಸ್ತೆಗೆ ಲಗತ್ತಾಗಿದ್ದು, ಸದರಿ ರಸ್ತೆಯನ್ನು 12.0ಮೀ ಅಗಲಕ್ಕೆ ವಿಸ್ತರಿಸಲು ವಿನ್ಯಾಸ ನಕ್ಷೆಯಲ್ಲಿ ಪ್ರಸ್ತಾವಿಸಲಾಗಿದೆ. ಸದರಿ ಜಮೀನಿನ ಏಕ–ನಿವೇಶನ ವಿನ್ಯಾಸ ನಕ್ಷೆಯಲ್ಲಿ ಕೈಗಾರಿಕೆ ಉಪಯೋಗಕ್ಕಾಗಿ 10213.80 ಚ.ಮೀ (ಶೇ. 84.13%), ವಾಹನ ನಿಲುಗಡೆಗಾಗಿ 607.03 ಚ.ಮೀ (ಶೇ.5.00)%, ಉದ್ಯಾನವನಕ್ಕಾಗಿ 1214.06 ಚ.ಮೀ (ಶೇ.10%), ರಸ್ತೆ ವಿಸ್ತರಣೆಗಾಗಿ 105.72 ಚ.ಮೀ (ಶೇ.0.87%) ವಿಸ್ತೀರ್ಣದ ಪ್ರದೇಶವನ್ನು ಮೀಸಲಿರಿಸಿ ವಿನ್ಯಾಸ ನಕ್ಷೆ ಸಲ್ಲಿಸಿರುತ್ತಾರೆ. ನಕ್ಷೆಯಲ್ಲಿ ನ್ಯೂನತೆ ಕಂಡುಬಂದಿರುತ್ತದೆ. ಆದ್ದರಿಂದ ಅರ್ಜಿದಾರರು ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆಯನ್ನು ಸಲ್ಲಿಸಿದ ನಂತರ ಹಾಗೂ ವಿನ್ಯಾಸ ನಕ್ಷೆಯನ್ನು ಸರಿಪಡಿಸಿ ಸಲ್ಲಿಸಿದ ನಂತರ ವಿನ್ಯಾಸ ನಕ್ಷೆಗೆ ನಿವೇಶನದಲ್ಲಿ ಕಟ್ಟಡ ಪರವಾನಗಿ ಪಡೆಯುವ ಸಂದರ್ಭದಲ್ಲಿ ಪರಿಸರ ಮಾಲಿನ್ಯ ನಿಯಂತ್ರಣಕ್ಕೆ ಸಂಬಂಧಿಸಿದ ಇಲಾಖೆಯಿಂದ ಸ್ಥಾಪನ ಸಮ್ಮತಿ ಪತ್ರ ಪಡೆದು ಸಲ್ಲಿಸುವ ಷರತ್ತಿಗೊಳಡಿಸಿ ಕೈಗಾರಿಕೆ (ಕಾಫೀ ಕ್ಯೂರಿಂಗ್ ವರ್ಕ್ಸ್) ಉದ್ದೇಶದ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಬಹುದಾಗಿದೆ. ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

ನಿರ್ಣಯ: ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆಯನ್ನು ಸಲ್ಲಿಸಿದ ನಂತರ ಮತ್ತು ವಿನ್ಯಾಸ ನಕ್ಷೆಯನ್ನು ಸರಿಪಡಿಸಿ ಸಲ್ಲಿಸಿದ ನಂತರ ಹಾಗೂ ನಿವೇಶನದಲ್ಲಿ ಕಟ್ಟಡ ಪರವಾನಗಿ ಪಡೆಯುವ ಸಂದರ್ಭದಲ್ಲಿ ಪರಿಸರ ಮಾಲಿನ್ಯ ನಿಯಂತ್ರಣಕ್ಕೆ ಸಂಬಂಧಿಸಿದ ಇಲಾಖೆಯಿಂದ ಸ್ಥಾಪನ ಸಮ್ಮತಿ ಪತ್ರ ಪಡೆದು ಸಲ್ಲಿಸುವ ಷರತ್ತಿಗೊಳಡಿಸಿ ಕೈಗಾರಿಕೆ (ಕಾಫೀ ಕ್ಯೂರಿಂಗ್ ವರ್ಕ್ಸ್) ಉದ್ದೇಶದ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯ ಸಂಖ್ಯೆ(8): ಕುಶಾಲನಗರ ಯೋಜನಾ ಪ್ರಾಧಿಕಾರದಿಂದ ವಲಯ ದೃಢೀಕರಣ ಪತ್ರವನ್ನು ಕೋರುವ ಅರ್ಜಿದಾರರಿಂದ ಪರಿಶೀಲನಾ ಶುಲ್ಕ ಪಾವತಿಸಿಕೊಳ್ಳುವ ಬಗ್ಗೆ.

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಯಲ್ಲಿ ಅನೇಕ ಭೂಉಪಯೋಗ ವಲಯಗಳಿದ್ದು, ಅರ್ಜಿದಾರರು ತಮ್ಮ ಜಮೀನಿಗೆ ಭೂಪರಿವರ್ತನೆ ಮಾಡಿಸಿಕೊಳ್ಳುವಾಗ, ಅಲಿನೇಷನ್ ನಕ್ಷೆ ಅಥವಾ 11ಇ ನಕ್ಷೆಗೆ ಅರ್ಜಿ ಹಾಕುವ ಮುನ್ನ ಹಾಗೂ ಭೂಪರಿವರ್ತನೆಗೆ ಈ ಕಛೇರಿಯಿಂದ ತಾಂತ್ರಿಕ ಅಭಿಪ್ರಾಯ ನೀಡುವ ಮುನ್ನ ಈ ಕಛೇರಿಯಿಂದ ವಲಯ ದೃಢೀಕರಣ ಪತ್ರವನ್ನು ಕೋರಿ ಅರ್ಜಿಗಳನ್ನು ಸಲ್ಲಿಸುತ್ತಿದ್ದು, ಮಾಹಿತಿಯನ್ನು ನೀಡುವಂತೆ ಕೋರುತ್ತಿದ್ದಾರೆ. ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆಯಲ್ಲಿ ಒಂದೇ ಸರ್ವೆ ನಂಬರ್ 2–3 ಭೂಉಪಯೋಗ ವಲಯಗಳಲ್ಲಿ ಕಾಯ್ದಿರಿಸಿರುವುದು ಕಂಡುಬಂದಿರುತ್ತದೆ. ಹಾಗಾಗಿ ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆಯಂತೆ ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶದಲ್ಲಿರುವ ವಲಯಗಳನ್ನು ಪರಿಶೀಲಿಸಿ ಅರ್ಜಿದಾರರಿಗೆ ಸಂಬಂಧಪಟ್ಟ ಜಮೀನಿನ ವಲಯದ ಅಳತೆ ಹಾಗೂ ವಿಸ್ತೀರ್ಣದ ಮಾಹಿತಿಯನ್ನು ನೀಡಬೇಕಾಗಿರುತ್ತದೆ. ಅದಲ್ಲದೆ, ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಹಾಗೂ ಬಂಟ್ವಾಳ ಯೋಜನಾ ಪ್ರಾಧಿಕಾರಗಳಲ್ಲಿ ಈಗಾಗಾಲೇ ಈ ವಿಷಯಕ್ಕೆ ಸಂಬಂಧಿಸಿದಂತೆ ಶುಲ್ಕವನ್ನು ಪಾವತಿಸಿಕೊಳ್ಳುತ್ತಿರುತ್ತಾರೆ. ಆದ್ದರಿಂದ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ವಲಯ ದೃಢೀಕರಣ ಪತ್ರವನ್ನು ನೀಡುವಾಗ ಅರ್ಜಿದಾರರಿಂದ ಪ್ರತಿ ಚದರ ಮೀಟರ್‌ಗೆ 50 ಪೈಸೆಯಂತೆ (ಕನಿಷ್ಟ ರೂ.500/–) ಶುಲ್ಕ ಪಾವತಿಸಿಕೊಳ್ಳುವುದು ಸಮಂಜಸವಾಗಿರುತ್ತದೆ. ಸದರಿ ವಿಷಯವನ್ನು ಸಭೆಯ ನಿರ್ಣಯಕ್ಕೆ ಮಂಡಿಸಿದೆ.

ನಿರ್ಣಯ: ಸದರಿ ವಿಷಯಕ್ಕೆ ಸಂಬಂಧಿಸಿದಂತೆ ವಲಯ ದೃಢೀಕರಣ ಪತ್ರವನ್ನು ನೀಡುವಾಗ ಅರ್ಜಿದಾರರಿಂದ ಪ್ರತಿ ಚದರ ಮೀಟರ್‌ಗೆ 50 ಪೈಸೆಯಂತೆ (ಕನಿಷ್ಟ ರೂ.500/–) ಶುಲ್ಕ ಪಾವತಿಸಿಕೊಳ್ಳಬೇಕೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯ ಸಂಖ್ಯೆ(9): ಪ್ರಾಧಿಕಾರದ ಕಛೇರಿ ಕಟ್ಟಡದ ಬಾಡಿಗೆಯನ್ನು ಪಿ.ಡಬ್ಲ್ಯೂ.ಡಿಯವರು ದರವನ್ನು ನಿಗದಿಪಡಿಸಿದ್ದು, ಅದರಂತೆ, ಒಡಂಬಡಿಕೆಯ ಪ್ರಕಾರ ಹೆಚ್ಚಿಸುವ ಬಗ್ಗೆ.

ಟಿಪ್ಪಣಿ: ಕುಶಾಲನಗರ ಯೋಜನಾ ಪ್ರಾಧಿಕಾರದ ಕಛೇರಿ ಕಟ್ಟಡದ ಮಾಲೀಕರಾದ ಶ್ರೀ ಕೆ.ಬಿ. ಅಜಿತ್ ಕುಮಾರ್, ಕಾವೇರಿ ಬಡಾವಣೆ, ಕುಶಾಲನಗರ ಇವರು ದಿನಾಂಕ: 05–09–2022 ರಂದು ಮನವಿ ಸಲ್ಲಿಸಿ, ಕಛೇರಿ ಬಾಡಿಗೆಯನ್ನು ರೂ. 9,000/– ಗಳಿಂದ ರೂ. 11,000/– ಗಳಿಗೆ ತಕ್ಷಣದಿಂದ ಹೆಚ್ಚಿಸಿಕೊಡಬೇಕೆಂದು ಕೋರಿರುತ್ತಾರೆ. ಸದರಿ ವಿಷಯವನ್ನು ದಿನಾಂಕ:16–09–2022 ರಂದು ನಡೆದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ(9) ರಲ್ಲಿ ಮಂಡಿಸಿದ್ದು, ಕಛೇರಿ ಬಾಡಿಗೆ ದರವನ್ನು ನಿಗದಿಪಡಿಸಿಕೊಡುವಂತೆ ಕೋರಿ ಲೋಕೋಪಯೋಗಿ ಇಲಾಖೆಗೆ ಪತ್ರ ಬರೆಯುವಂತೆ ಹಾಗೂ ನಿಗದಿಪಡಿಸಿರುವ ದರದ ಬಗ್ಗೆ ವಿಷಯವನ್ನು ಪ್ರಾಧಿಕಾರದ ಮುಂದಿನ ಸಭೆಗೆ ಮಂಡಿಸುವಂತೆ ಸಭೆಯು ಸದಸ್ಯಕಾರ್ಯದರ್ಶಿಯವರಿಗೆ ಸೂಚಿಸಿ ನಿರ್ಣಯಿಸಲಾಗಿದೆ. ಅದರಂತೆ, ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಕೊಡಗು ವಿಭಾಗ. ಮಡಿಕೇರಿ ಇವರು ದಿನಾಂಕ:11–

07–2023 ರಂದು ಕಛೇರಿ ಕಟ್ಟಡದ ಬಾಡಿಗೆಯನ್ನು ಮಾಸಿಕ ರೂ. 11,500/– ಗಳಿಗೆ ನಿಗದಿಪಡಿಸಿ ನೀಡಿರುತ್ತಾರೆ. ವಿಷಯವನ್ನು ಸಭೆಯ ಚರ್ಚೆಗೆ ಮಂಡಿಸಿದೆ.

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಕುಶಾಲನಗರ ಯೋಜನಾ ಪ್ರಾಧಿಕಾರದ ಕಟ್ಟಡ ಮಾಲೀಕರಾದ ಶ್ರೀ ಕೆ.ಬಿ. ಅಜಿತ್‌ಕುಮಾರ್‌ರವರು ದಿನಾಂಕ: 26–06–2023 ರಂದು ಮನವಿ ಸಲ್ಲಿಸಿ, ಲೋಕೋಪಯೋಗಿ ಇಲಾಖೆಯವರು ಬಾಡಿಗೆ ದರವನ್ನು ನಿಗದಿಪಡಿಸಿ ನೀಡುವವರೆಗೆ ಈಗ ನೀಡುತ್ತಿರುವ ತಿಂಗಳಿಗೆ ರೂ. 9000/– ದಂತೆ ಜುಲೈ 2022 ರಿಂದ ರಿಂದ ಮೇ 2023 ರ ವರೆಗಿನ ಒಟ್ಟು 11 ತಿಂಗಳ ಬಾಡಿಗೆಯನ್ನು ನೀಡಬೇಕೆಂದು ಕೋರಿರುತ್ತಾರೆ. ಅದರಂತೆ ಸದರಿಯವರಿಗೆ ಪ್ರತಿ ಮಾಹೆ ರೂ. 9000/– ಗಳಂತೆ ಜುಲೈ 2022 ರಿಂದ ಮೇ 2023 ರವರೆಗೆ ಒಟ್ಟು 11 ತಿಂಗಳ ಬಾಡಿಗೆ ರೂ. 99,000/– ಗಳಿಗೆ ಚೆಕ್ (ಸಂ: 984154 ದಿನಾಂಕ: 10–07–2023) ನೀಡಿ ಬಾಡಿಗೆಯನ್ನು ಪಾವತಿಸಲಾಗಿದೆ. ಲೋಕೋಪಯೋಗಿ ಇಲಾಖೆಯವರು ಕಛೇರಿ ಕಟ್ಟಡದ ಬಾಡಿಗೆಯನ್ನು ಪ್ರತಿ ಮಾಹೆ ರೂ. 11,500/– ಗಳಂತೆ ನಿಗದಿಪಡಿಸಿರುತ್ತಾರೆ. ಕಛೇರಿ ಕಟ್ಟಡದ ಮಾಲೀಕರು ಈಗ ನೀಡುತ್ತಿರುವ ರೂ. 9,000/– ಗಳಿಂದ ರೂ. 11,000/–ಗಳಿಗೆ ನಿಗದಿಪಡಿಸಿಕೊಡಬೇಕೆಂದು ಕೋರಿರುತ್ತಾರೆ. ಆದ್ದರಿಂದ ಲೋಕೋಪಯೋಗಿಯವರು ನಿಗಧಿಪಡಿಸಿರುವ ಬಾಡಿಗೆ ರೂ. 11,500/– ಗಳು ಹೆಚ್ಚಾಗಿದ್ದು, ಕಟ್ಟಡದ ಮಾಲೀಕರೊಂದಿಗೆ ಮಾತುಕತೆ ಮೂಲಕ ನೀರಿನ ತೆರಿಗೆಯನ್ನು ಸೇರಿಸಿ ಪ್ರತಿ ಮಾಹೆ ರೂ. 11,000/– ಗಳಂತೆ ಪಾವತಿಸಲು ವಿಷಯವನ್ನು ಸಭೆಯ ಚರ್ಚೆಗೆ ಮಂಡಿಸಿದೆ.

ನಿರ್ಣಯ: ವಿಷಯಕ್ಕೆ ಸಂಬಂಧಿಸಿದಂತೆ ಸಭೆಯಲ್ಲಿ ಚರ್ಚಿಸಿ, ನೀರಿನ ತೆರಿಗಯನ್ನು ಸೇರಿಸಿ ಕಟ್ಟಡದ ಬಾಡಿಗೆಯನ್ನು ಪ್ರತಿ ಮಾಹೆ ರೂ. 11,500/– ಗಳಂತೆ ಪಾವತಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯ ಸಂಖ್ಯೆ(10): ಕುಶಾಲನಗರ ಯೋಜನಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯವರು ಖಾಸಗಿ ವಾಹನವನ್ನು ಉಪಯೋಗಿಸಿಕೊಳ್ಳುವ ಬಗ್ಗೆ.

ಟಿಪ್ಪಣಿ: ಕುಶಾಲನಗರ ಯೋಜನಾ ಪ್ರಾಧಿಕಾರದ ಕಛೇರಿ ಕೆಲಸಕ್ಕೆ ಯಾವುದೇ ವಾಹನ ಸೌಲಭ್ಯ ಇಲ್ಲದೆ ಇರುವುದರಿಂದ ಪ್ರತಿ ವಾರ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನಡೆಯುವ ಭೂಪರಿವರ್ತನೆ ಹಾಗೂ ಇನ್ನಿತರ ವಿಷಯಗಳ ಸಭೆಗೆ ಹಾಜರಾಗಬೇಕಿರುತ್ತದೆ. ದಿನಾಂಕ:24–07–2023 ರಂದು ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ನಗರ ಯೋಜನಾ ಸದಸ್ಯರು ಹಾಗೂ ಆಯುಕ್ತರ ಪ್ರಭಾರವನ್ನು ಪಡೆಯಲಾಗಿದ್ದು, ಜಿಲ್ಲಾ ಮುಖ್ಯ ಕೇಂದ್ರವಾದ ಮಡಿಕೇರಿಗೆ ತೆರಳಲು ವಾಹನ ಸೌಲಭ್ಯದ ಅಗತ್ಯವಿರುತ್ತದೆ. ಅದಲ್ಲದೆ ನಗರಾಭಿವೃದ್ಧಿ ಇಲಾಖೆ, ಬೆಂಗಳೂರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಕೇಂದ್ರ ಕಛೇರಿ ಬೆಂಗಳೂರು, ಜಂಟಿನಿರ್ದೇಶಕರ ವಿಭಾಗೀಯ ಕಛೇರಿ, ಮೈಸೂರು ಇಲ್ಲಿಗೆ ಕಛೇರಿ ಕೆಲಸಗಳು ಅಥವಾ ಸಭೆಗೆ ಹಾಜರಾಗುವ ನಿಮಿತ್ತ ಖಾಸಗಿ ವಾಹನದಲ್ಲಿ ಹೋಗಿ ಬರಲು ಅನುಮತಿಗಾಗಿ ವಿಷಯವನ್ನು ಸಭೆಗೆ ಮಂಡಿಸಿದೆ.

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಕುಶಾಲನಗರ ಯೋಜನಾ ಪ್ರಾಧಿಕಾರದ ಕಛೇರಿ ಕೆಲಸಕ್ಕೆ ಯಾವುದೇ ವಾಹನ ಸೌಲಭ್ಯ ಇಲ್ಲದೆ ಇರುವುದರಿಂದ ಹೊರಗುತ್ತಿಗೆ ಆಧಾರದಲ್ಲಿ ಖಾಸಗಿ ವಾಹನವನ್ನು ಪಡೆಯಲು ದಿನಾಂಕ: 06–06–2023 ರಂದು ನಡೆದ ಸಾಮಾನ್ಯ ಸಭೆಯಲ್ಲಿ ವಿಷಯವನ್ನು ಮಂಡಿಸಿ ಚರ್ಚಿಸಿದ ನಂತರ ಸರ್ಕಾರದ ಪೂರ್ವಾನುಮತಿ ಪಡೆದು ಕಛೇರಿಯ ಉಪಯೋಗಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ವಾಹನ ಸೌಲಭ್ಯವನ್ನು ಹೊಂದಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಿದಂತೆ, ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ಇವರಿಗೆ ದಿನಾಂಕ: 15–06–2023 ರಂದು ಪತ್ರ ಬರೆಯಲಾಗಿದ್ದು, ಸರ್ಕಾರದಿಂದ ಇದುವರೆಗೂ ಅನುಮತಿ ಪತ್ರ ಬಂದಿರುವುದಿಲ್ಲ. ದಿನಾಂಕ:28–04–2023 ರಂದು ಈಗಾಗಲೇ ಮಾನ್ಯ ಜಿಲ್ಲಾಧಿಕಾರಿಗಳಿಂದ ಕುಶಾಲನಗರ ಯೋಜನಾ

ಪ್ರಾಧಿಕಾರದ 2023–24ನೇ ಸಾಲಿನ ನಿರೀಕ್ಷಿತ ಆಯವ್ಯಯ ಅಂದಾಜು ಪತ್ರಕ್ಕೆ ಅನುಮೋದನೆ ದೊರೆತಿದ್ದು, ಅದರಲ್ಲಿ ಬಾಡಿಗೆ ಆಧಾರದ ವಾಹನ ವೆಚ್ಚಕ್ಕೆ ರೂ. 40,000/–ಗಳನ್ನು ಅಂದಾಜು ಮೊತ್ತವಾಗಿ ಕಾಯ್ದಿರಿಸಿದ್ದು, ಅದರ ಜೊತೆ ಒಟ್ಟು ಸಂದಾಯವನ್ನು ಹೊರತುಪಡಿಸಿ ಅಂತಿಮ ಶಿಲ್ಕು 6,54,268 ಇದ್ದು, ಅದನ್ನು ವಾಹನ ಸೌಲಭ್ಯಕ್ಕೆ ಉಪಯೋಗಿಸಿಕೊಳ್ಳಬಹುದಾಗಿರುತ್ತದೆ. ಸರ್ಕಾರದಿಂದ ಸದರಿ ವಿಷಯಕ್ಕೆ ಅನುಮತಿ ದೊರೆಯುವವರೆಗೂ ಖಾಸಗಿ ವಾಹನವನ್ನು ಪಡೆದು ಉಪಯೋಗಿಸಿಕೊಳ್ಳಲು ಅನುಮತಿಗಾಗಿ ವಿಷಯವನ್ನು ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ.

ನಿರ್ಣಯ: ಸದರಿ ವಿಷಯದ ಬಗ್ಗೆ ಸದಸ್ಯಕಾರ್ಯದರ್ಶಿಗಳ ಅಭಿಪ್ರಾಯವನ್ನು ಪರಿಗಣಿಸಿ ಕುಶಾಲನಗರ ಯೋಜನಾ ಪ್ರಾಧಿಕಾರದ ಕಡತಗಳಿಗೆ ಸಂಬಂಧಿಸಿದಂತೆ ಸ್ಥಳಪರಿಶೀಲನೆ ಮಾಡಲು, ಜಿಲ್ಲಾಧಿಕಾರಿಗಳ ಕಛೇರಿ ಮಡಿಕೇರಿ, ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರ, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಕೇಂದ್ರ ಕಛೇರಿ ಬೆಂಗಳೂರು, ಜಂಟಿನಿರ್ದೇಶಕರ ವಿಭಾಗೀಯ ಕಛೇರಿ, ಮೈಸೂರು ಇಲ್ಲಿನ ಸಭೆಗಳಿಗೆ ತೆರಳಲು ವಾಹನ ಸೌಲಭ್ಯ ಅತ್ಯಾವಶ್ಯಕವಾಗಿರುವುದರಿಂದ ಕೆ.ಟಿ.ಪಿ.ಪಿ ಕಾಯ್ದೆಯ ಅನುಗುಣವಾಗಿ ಹಾಗೂ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ.30 ಶಿವಾನಿ 2019, ಬೆಂಗಳೂರು, ದಿನಾಂಕ: 31–03–2022 ರನ್ನು ಪರಿಗಣಿಸಿಕೊಂಡು ಖಾಸಗಿ ವಾಹನ ಸರಬರಾಜು ಸಂಸ್ಥೆಗಳಿಗೆ ಪ್ರಕಟಣೆ ನೀಡಿ, ಗುತ್ತಿಗೆ ಆಧಾರದ ಮೇಲೆ ವಾಹನ ಸೌಲಭ್ಯ ಪಡೆಯಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯ ಸಂಖ್ಯೆ(11): ಕುಶಾಲನಗರ ಯೋಜನಾ ಪ್ರಾಧಿಕಾರದ ಹೆಸರಿನಲ್ಲಿರುವ ನಾಗರೀಕ ಸೌಲಭ್ಯ ನಿವೇಶನಗಳನ್ನು ಸಂಘ ಸಂಸ್ಥೆಯವರಿಗೆ 30 ವರ್ಷಗಳ ಗುತ್ತಿಗೆ (ಲೀಜ್) ಅವಧಿಗೆ ವಿತರಿಸಲು ಪ್ರಕಟಣೆ ನೀಡಿರುವ ಬಗ್ಗೆ.

i. ಕುಶಾಲನಗರ ಯೋಜನಾ ಪ್ರಾಧಿಕಾರದ ಹೆಸರಿನಲ್ಲಿರುವ ಏಳು ನಾಗರೀಕ ಸೌಲಭ್ಯ ನಿವೇಶನಗಳನ್ನು ಸಂಘ ಸಂಸ್ಥೆಯವರಿಗೆ 30 ವರ್ಷಗಳ ಗುತ್ತಿಗೆ (ಲೀಜ್) ಅವಧಿಗೆ ವಿತರಿಸಲು ಎರಡು ಭಾಷೆಯ ದಿನಪತ್ರಿಕೆಗಳಲ್ಲಿ ಪ್ರಕಟಣೆಯನ್ನು ನೀಡಲಾಗಿದ್ದು, ಘಟನ್ನೋತ್ತರ ಮಂಜೂರಾತಿಗಾಗಿ ಸಭೆಗೆ ಮಂಡಿಸಿರುವ ಬಗ್ಗೆ.

ಟಿಪ್ಪಣಿ: ಕುಶಾಲನಗರ ಯೋಜನಾ ಪ್ರಾಧಿಕಾರದ ಹೆಸರಿನಲ್ಲಿರುವ ನಾಗರೀಕ ಸೌಲಭ್ಯ ನಿವೇಶನಗಳನ್ನು ಹಂಚಿಕೆ ಮಾಡುವ ಸಂದರ್ಭದಲ್ಲಿ ಸರ್ಕಾರದ ಅಧೀನ ಕಾರ್ಯದರ್ಶಿಯವರ ಪತ್ರ ಸಂಖ್ಯೆ: ನಅಇ 27 ಟಿಟಿಪಿ 2016 ಬೆಂಗಳೂರು, ದಿನಾಂಕ: 13–06–2017 ರ ಪ್ರಕಾರ ಯೋಜನಾ ಪ್ರಾಧಿಕಾರಗಳು ಕರ್ನಾಟಕ ಯೋಜನಾ ಪ್ರಾಧಿಕಾರದ (ನಾಗರೀಕ ಸೌಲಭ್ಯ ನಿವೇಶನ ಹಂಚಿಕೆ) ನಿಯಮಗಳು 2016 ಅನ್ನು ಪಾಲಿಸಬೇಕಿದ್ದು, ಅದರಂತೆ ಈ ನಿಯಮದ ಉಪನಿಯಮ 9(4) ಪ್ರಕಾರ ನಾಗರೀಕ ಸೌಲಭ್ಯ ನಿವೇಶನಗಳನ್ನು ಪಟ್ಟಿ ಮಾಡಿ ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡಲು ಪ್ರಕಟಣೆಯನ್ನು ನೀಡಬೇಕಾಗಿರುತ್ತದೆ. ಪ್ರಾಧಿಕಾರದ ಹೆಸರಿನಲ್ಲಿರುವ ಏಳು ನಾಗರೀಕ ಸೌಲಭ್ಯ ನಿವೇಶನಗಳ ಮಾರುಕಟ್ಟೆ ದರವನ್ನು ಉಪನೋಂದಣಾಧಿಕಾರಿಗಳು, ಕುಶಾಲನಗರ ಇವರು ನಿಗದಿಪಡಿಸಿ ನೀಡಿರುತ್ತಾರೆ. ಅದರಂತೆ ಗುತ್ತಿಗೆ ಮೊಬಲಗನ್ನು ನಿಗಧಿಪಡಿಸಿ ಸಂಘ ಸಂಸ್ಥೆಯವರಿಗೆ 30 ವರ್ಷಗಳ ಗುತ್ತಿಗೆ (ಲೀಜ್) ಅವಧಿಗೆ ವಿತರಿಸಲು ಪ್ರಾಧಿಕಾರದ ಅಧ್ಯಕ್ಷರಾದ ಉಪವಿಭಾಗಾಧಿಕಾರಿಗಳು ಮಡಿಕೇರಿ ಇವರ ಸಹಿಯನ್ನು ಪಡೆದು ಸರ್ಕಾರದ ಸುತ್ತೋಲೆಯಂತೆ ಸ್ಥಳೀಯ ಯೋಜನಾ ಪ್ರದೇಶದಲ್ಲಿ ವ್ಯಾಪಕ ಪ್ರಚಾರದಲ್ಲಿರುವ ಕನ್ನಡ (ಶಕ್ತಿ ದಿನಪತ್ರಿಕೆ) ಮತ್ತು ಇಂಗ್ಲೀಷ್ (Deccan Herald) ಎರಡು ಭಾಷೆಯ ದಿನಪತ್ರಿಕೆಗಳಲ್ಲಿ ಪ್ರಕಟಣೆಯನ್ನು ನೀಡಲಾಗಿದೆ. ವಿಷಯವನ್ನು ಘಟನ್ನೋತ್ತರ ಮಂಜೂರಾತಿಗಾಗಿ ಸಭೆಗೆ ಮಂಡಿಸಿದೆ.

ii. ಕುಶಾಲನಗರ ಯೋಜನಾ ಪ್ರಾಧಿಕಾರದ ಹೆಸರಿನಲ್ಲಿರುವ ಏಳು ನಾಗರೀಕ ಸೌಲಭ್ಯ ನಿವೇಶನಗಳನ್ನು ಸಂಘ ಸಂಸ್ಥೆಯವರಿಗೆ 30 ವರ್ಷಗಳ ಗುತ್ತಿಗೆ (ಲೀಜ್) ಅವಧಿಗೆ ವಿತರಿಸಲು ಎರಡು ಭಾಷೆಯ ದಿನಪತ್ರಿಕೆಗಳಲ್ಲಿ ಪ್ರಕಟಣೆಯನ್ನು ನೀಡಲಾಗಿದ್ದು, ಜಾಹಿರಾತು ವೆಚ್ಚವನ್ನು ಪಾವತಿಸುವ ಬಗ್ಗೆ.

ಟಿಪ್ಪಣಿ: ಯೋಜನಾ ಪ್ರಾಧಿಕಾರಗಳು ಕರ್ನಾಟಕ ಯೋಜನಾ ಪ್ರಾಧಿಕಾರಗಳ (ನಾಗರೀಕ ಸೌಕರ್ಯ ನಿವೇಶನಗಳ ಹಂಚಿಕೆ) ನಿಯಮಗಳು 2016 ರ ಉಪನಿಯಮ (9)ರ ಪ್ರಕಾರ ಸ್ಥಳೀಯ ಯೋಜನಾ ಪ್ರದೇಶದಲ್ಲಿ ವ್ಯಾಪಕ ಪ್ರಚಾರದಲ್ಲಿರುವ ಇಂಗ್ಲೀಷ್ ಹಾಗೂ ಕನ್ನಡ ಎರಡು ಭಾಷೆಯಲ್ಲಿ ಎರಡು ದಿನಪತ್ರಿಕೆಗಳಲ್ಲಿ ಪ್ರಕಟಿಸುವ ಬಗ್ಗೆ ಪ್ರಕಟಣೆಯನ್ನು ಸಿದ್ಧಪಡಿಸಿ ದಿನಾಂಕ:24–07–2023 ರಂದು ಪ್ರಾಧಿಕಾರದ ಅಧ್ಯಕ್ಷರು/ಉಪವಿಭಾಗಾಧಿಕಾರಿಗಳ ಸಹಿಯನ್ನು ಪಡೆಯಲಾಗಿದ್ದು, ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರ ಮೂಲಕ ದಿನಾಂಕ:25–07–2023 ರಂದು ಕನ್ನಡ (ಶಕ್ತಿ ದಿನಪತ್ರಿಕೆ) ಮತ್ತು ಇಂಗ್ಲೀಷ್ (Deccan Herald) ಎರಡು ಭಾಷೆಯ ದಿನಪತ್ರಿಕೆಗಳಲ್ಲಿ ಪ್ರಕಟಣೆಯನ್ನು ನೀಡಲಾಗಿದೆ. ಸದರಿ ಜಾಹಿರಾತು ವೆಚ್ಚವನ್ನು ಪ್ರಾಧಿಕಾರದಿಂದ ಪಾವತಿಸಲು ವಿಷಯವನ್ನು ಸಭೆಗೆ ಮಂಡಿಸಿದೆ.

iii. ಕುಶಾಲನಗರ ಯೋಜನಾ ಪ್ರಾಧಿಕಾರದ ಹೆಸರಿನಲ್ಲಿರುವ ನಾಗರೀಕ ಸೌಲಭ್ಯ ನಿವೇಶನಗಳನ್ನು ಸಂಘ ಸಂಸ್ಥೆಯವರಿಗೆ 30 ವರ್ಷಗಳ ಗುತ್ತಿಗೆ (ಲೀಜ್) ಅವಧಿಗೆ ವಿತರಿಸಲು ಸದರಿ ಪ್ರಸ್ತಾವನೆಗೆ ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ಅಭಿವೃದ್ಧಿ ಖಾತೆಯೆಂದು (V-Fund) ಅನ್ನು ತೆರೆಯಬೇಕಾಗಿರುವ ಬಗ್ಗೆ

ಟಿಪ್ಪಣಿ: ಕುಶಾಲನಗರ ಯೋಜನಾ ಪ್ರಾಧಿಕಾರದ ಹೆಸರಿನಲ್ಲಿರುವ ನಾಗರೀಕ ಸೌಲಭ್ಯ ನಿವೇಶನಗಳನ್ನು ಸಂಘ ಸಂಸ್ಥೆಯವರಿಗೆ 30 ವರ್ಷಗಳ ಗುತ್ತಿಗೆ (ಲೀಜ್) ಅವಧಿಗೆ ವಿತರಿಸಲು ಶುಲ್ಕ ಪಾವತಿಸಿಕೊಳ್ಳಬೇಕಾಗಿದ್ದು, ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ಇವರ ಸುತ್ತೋಲೆ ಸಂ: ಯುಡಿಡಿ 285 ಮೈಅಪ್ರಾ 2016, ಬೆಂಗಳೂರು ದಿನಾಂಕ: 03–06–2019ರ ಪ್ರಕಾರ ಸದರಿ ಪ್ರಸ್ತಾವನೆಗೆ ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ಅಭಿವೃದ್ಧಿ ಖಾತೆಯೆಂದು (V-Fund) ಅನ್ನು ತೆರೆಯಬೇಕಾಗಿರುತ್ತದೆ. ಹಾಗಾಗಿ ವಿಷಯವನ್ನು ಸಭೆಗೆ ಮಂಡಿಸಿದೆ.

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಟಿಪ್ಪಣಿಗಳಲ್ಲಿ ವಿವರಿಸಿರುವಂತೆ, ಸರ್ಕಾರದ ಸುತ್ತೋಲೆಯಂತೆ ಕ್ರಮವಹಿಸಿ, ಪ್ರಾಧಿಕಾರದ ಹೆಸರಿನಲ್ಲಿರುವ ಏಳು ಸಿ.ಎ. ನಿವೇಶನಗಳ ಪ್ರಕಟಣೆಯನ್ನು ಸಿದ್ಧಪಡಿಸಿ, ಪ್ರಾಧಿಕಾರದ ಅಧ್ಯಕ್ಷರಾದ ಉಪವಿಭಾಗಾಧಿಕಾರಿಗಳು ಮಡಿಕೇರಿ ಇವರ ಸಹಿಯನ್ನು ಪಡೆದು, ಸ್ಥಳೀಯ ಯೋಜನಾ ಪ್ರದೇಶದಲ್ಲಿ ವ್ಯಾಪಕ ಪ್ರಚಾರದಲ್ಲಿರುವ ಕನ್ನಡ (ಶಕ್ತಿ ದಿನಪತ್ರಿಕೆ) ಮತ್ತು ಇಂಗ್ಲೀಷ್ (Deccan Herald) ಎರಡು ಭಾಷೆಯ ದಿನಪತ್ರಿಕೆಗಳಲ್ಲಿ ಪ್ರಕಟಣೆಯನ್ನು ನೀಡಲಾಗಿದೆ. ಸದರಿ ವಿಷಯವನ್ನು ಘಟನ್ನೋತ್ತರ ಮಂಜೂರಾತಿ ಪಡೆಯಬೇಕಿರುತ್ತದೆ.

ಸದರಿ ಪ್ರಕಟಣೆಯನ್ನು ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರ ಮೂಲಕ ದಿನಾಂಕ:25–07–2023 ರಂದು ಕನ್ನಡ (ಶಕ್ತಿ ದಿನಪತ್ರಿಕೆ) ಮತ್ತು ಇಂಗ್ಲೀಷ್ (Deccan Herald) ಎರಡು ಭಾಷೆಯ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗಿದ್ದು, ಸದರಿ ಜಾಹಿರಾತು ವೆಚ್ಚವನ್ನು ಪ್ರಾಧಿಕಾರದಿಂದ ಪಾವತಿಸಬೇಕಿರುತ್ತದೆ.

ಸರ್ಕಾರದ ಸುತ್ತೋಲೆಯಂತೆ ಸದರಿ ಪ್ರಸ್ತಾವನೆಗೆ ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ಅಭಿವೃದ್ಧಿ ಖಾತೆಯೆಂದು (V-Fund) ಅನ್ನು ತೆರೆದು ಶೇಕಡಾ 50% ರಷ್ಟು ಮೊತ್ತವನ್ನು Town planning schemes ಗಾಗಿ, ಉದ್ಯಾನವನಗಳ ಅಭಿವೃದ್ಧಿಗಾಗಿ; ಹಾಗೂ ನಾಗರೀಕ ಸೌಲಭ್ಯಗಳನ್ನು ನೀಡಲು ಕೈಗೊಳ್ಳುವಂತಹ ಅಭಿವೃದ್ಧಿ ಕಾರ್ಯಗಳು, ಮೂಲ ಸೌಕರ್ಯಗಳ ಅಭಿವೃದ್ಧಿ, ದಾರಿದೀಪಗಳು, ಕಮಾನು ಇತ್ಯಾದಿಗಳನ್ನು ಸ್ಥಳೀಯ ಯೋಜನಾ ಪ್ರದೇಶಗಳ ಮಿತಿಯಲ್ಲಿ ಅಭಿವೃದ್ಧಿಪಡಿಸಲು ಮಾತ್ರ

ಉಪಯೋಗಿಸಿಕೊಳ್ಳಬಹುದಾಗಿರುತ್ತದೆ. ಆದ್ದರಿಂದ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಹೊಸದಾಗಿ ಖಾತೆಯನ್ನು ತೆರೆಯಬೇಕಾಗಿರುತ್ತದೆ. ಸದರಿ ವಿಷಯಗಳನ್ನು ಸಭೆಗೆ ಮಂಡಿಸಿದೆ.

ನಿರ್ಣಯ: ಕುಶಾಲನಗರ ಯೋಜನಾ ಪ್ರಾಧಿಕಾರದ ಹೆಸರಿನಲ್ಲಿರುವ ನಾಗರೀಕ ಸೌಲಭ್ಯ ನಿವೇಶನಗಳನ್ನು ಸಂಘ ಸಂಸ್ಥೆಯವರಿಗೆ 30 ವರ್ಷಗಳ ಗುತ್ತಿಗೆ (ಲೀಜ್) ಅವಧಿಗೆ ವಿತರಿಸಲು ಎರಡು ಭಾಷೆಯ ದಿನಪತ್ರಿಕೆಗಳಲ್ಲಿ ಪ್ರಕಟಣೆಯನ್ನು ನೀಡಲಾಗಿದ್ದು, ಸಭೆಯಲ್ಲಿ ಘಟನ್ನೋತ್ತರ ಮಂಜೂರಾತಿಯನ್ನು ಪಡೆಯಲಾಯಿತು.

ಕುಶಾಲನಗರ ಯೋಜನಾ ಪ್ರಾಧಿಕಾರದ ಹೆಸರಿನಲ್ಲಿರುವ ಏಳು ನಾಗರೀಕ ಸೌಲಭ್ಯ ನಿವೇಶನಗಳನ್ನು ಸಂಘ ಸಂಸ್ಥೆಯವರಿಗೆ 30 ವರ್ಷಗಳ ಗುತ್ತಿಗೆ (ಲೀಜ್) ಅವಧಿಗೆ ವಿತರಿಸಲು ಎರಡು ಭಾಷೆಯ ದಿನಪತ್ರಿಕೆಗಳಲ್ಲಿ ಪ್ರಕಟಣೆಯನ್ನು ನೀಡಲಾಗಿದ್ದು, ಸದರಿ ದಿನಪತ್ರಿಕೆಯವರು ನೀಡುವ ಜಾಹಿರಾತು ವೆಚ್ಚದ ರಸೀದಿಯನ್ನು ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು, ಕೊಡಗು ಜಿಲ್ಲೆ ಮಡಿಕೇರಿ ಇವರಿಂದ ಅದರ ದರವನ್ನು ಪರಿಶೀಲಿಸಿ ದೃಢೀಕರಿಸಿಕೊಂಡ ನಂತರ ಜಾಹಿರಾತು ವೆಚ್ಚವನ್ನು ಪಾವತಿಸುವಂತೆ ಸಭೆಯು ಸದಸ್ಯಕಾರ್ಯದರ್ಶಿಯವರಿಗೆ ಸೂಚಿಸಿ ನಿರ್ಣಯಿಸಿತು.

ಕುಶಾಲನಗರ ಯೋಜನಾ ಪ್ರಾಧಿಕಾರದ ಹೆಸರಿನಲ್ಲಿರುವ ನಾಗರೀಕ ಸೌಲಭ್ಯ ನಿವೇಶನಗಳನ್ನು ಸಂಘ ಸಂಸ್ಥೆಯವರಿಗೆ 30 ವರ್ಷಗಳ ಗುತ್ತಿಗೆ (ಲೀಜ್) ಅವಧಿಗೆ ವಿತರಿಸಲು ಸದರಿ ಪ್ರಸ್ತಾವನೆಗೆ ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ಅಭಿವೃದ್ಧಿ ಖಾತೆಯೆಂದು (V-Fund) ಅನ್ನು ತೆರೆಯಲು ಸಭೆಯಲ್ಲಿ ಒಪ್ಪಿ ನಿರ್ಣಯಿಸಲಾಯಿತು.

ವಿಷಯ ಸಂಖ್ಯೆ(12): ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಬಹುದಾದ ಇತರೆ ಹೆಚ್ಚುವರಿ ವಿಷಯಗಳು:

(ಅ) ಕುಶಾಲನಗರ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಕುಶಾಲನಗರ ಪುರಸಭೆ ವ್ಯಾಪ್ತಿಯಲ್ಲಿರುವ ಬೈಚನಹಳ್ಳಿ ಗ್ರಾಮದ ಸ.ನಂ 35 ರ ತಾವರೆಕೆರೆ, ಹಾಗೂ ಮುಳ್ಳುಸೋಗೆ ಗ್ರಾಮ, ಸ.ನಂ. 59 ರ ಸೋಮೇಶ್ವರ ದೇವರ ಕೆರೆಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ.

ನಿರ್ಣಯ: ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಿದ್ದು, ಈ ಹಿಂದಿನ ಸಭೆಗಳಲ್ಲಿನ ನಿರ್ಣಯಗಳನ್ನು ಪರಿಗಣಿಸಿ ಹಾಗೂ ಇಂದಿನ ಸ್ಥಿತಿಗೆ ಅನುಗುಣವಾಗಿ ಕಡತಗಳನ್ನು ಪರಿಶೀಲಿಸಿಕೊಂಡು ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಕುಶಾಲನಗರ ಪುರಸಭೆ ವ್ಯಾಪ್ತಿಯಲ್ಲಿರುವ ಬೈಚನಹಳ್ಳಿ ಗ್ರಾಮದ ಸ.ನಂ 35 ರ ತಾವರೆಕೆರೆ, ಹಾಗೂ ಮುಳ್ಳುಸೋಗೆ ಗ್ರಾಮ, ಸ.ನಂ. 59 ರ ಸೋಮೇಶ್ವರ ದೇವರ ಕೆರೆಗಳ ಅಭಿವೃದ್ಧಿಗಾಗಿ ಪೂರ್ವಾನುಮತಿಯನ್ನು ನೀಡುವಂತೆ ಮುಖ್ಯಾಧಿಕಾರಿ, ಪುರಸಭೆ ಇವರಿಗೆ ಮತ್ತು ತಹಶೀಲ್ದಾರರು, ಕುಶಾಲನಗರ ತಾಲ್ಲೂಕು ಇವರಿಗೆ ಮತ್ತೊಮ್ಮೆ ಪತ್ರ ಬರೆಯಲು ಹಾಗೂ ಸವಿಸ್ತಾರವಾದ ಅಂದಾಜು (Comprehensive Estimate) ಹಾಗೂ ವಿಸ್ತೃತ ಯೋಜನಾ ವರದಿಯನ್ನು (DPR) ಸಣ್ಣ ನೀರಾವರಿ ಇಲಾಖೆಯ ಸಹಯೋಗದೊಂದಿಗೆ ಸಿದ್ಧಪಡಿಸಲು ಚರ್ಚಿಸಿ, ತಾಂತ್ರಿಕ ಒಪ್ಪಿಗೆಯೊಂದಿಗೆ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರಕ್ಕೆ ಸಲ್ಲಿಸಲು ಮತ್ತೊಮ್ಮೆ ಪತ್ರ ಬರೆದು ಮುಂದಿನ ಕ್ರಮಕೈಗೊಳ್ಳಬೇಕೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು

ಸಹಿ/–	ಸಹಿ/–
ಸದಸ್ಯ ಕಾರ್ಯದರ್ಶಿ	ಅಧ್ಯಕ್ಷರು
ಕುಶಾಲನಗರ ಯೋಜನಾ ಪ್ರಾಧಿಕಾರ	ಕುಶಾಲನಗರ ಯೋಜನಾ ಪ್ರಾಧಿಕಾರ
ಕುಶಾಲನಗರ	ಕುಶಾಲನಗರ